ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

೧೦ನೇ ವರ್ಷ ೧೦ನೇ ಸಂಚಿಕೆ ಬೆಲೆ ೧-೦೦ ಪೈಸೆ

ಕೊಪ್ಪ ೧೭-೩-೧೯೯೧ ಭಾನುವಾರ ದೂರವಾಣಿ : ೧೧೪

ಹಳದಿ ಎಲೆ ರೋಗ ಪೀಡಿತ ತೋಟಗಳವರ ನಿಯೋಗದಿಂದ ಮುಖ್ಯಮಂತ್ರಿಗಳ ಭೇಟಿ

ಶಿವಮೊಗ್ಗ : ಮಲೆನಾಡಿನ ಹಳದಿ ಎಲೆ ರೋಗ ಪೀಡಿತ ಅಡಿಕೆ ತೋಟಗಳ ಸಂತ್ರಸ್ತರ ನಿಯೋಗವೊಂದು ಕೊಪ್ಪ ತಾ|| ಜನತಾ ಪಕ್ಷದ ಅಧ್ಯಕ್ಷ ಟಿ. ಪ್ರಕಾಶ್ ರವರ ನೇತೃತ್ವದಲ್ಲಿ ಈಚೆಗೆ ಮುಖ್ಯಮಂತ್ರಿ ಬಂಗಾರಪ್ಪನವರನ್ನು ಸೊರಬದಲ್ಲಿ ಭೇಟಿ ಮಾಡಿ ಹಲವು ಬೇಡಿಕೆಗಳನ್ನು ಮುಂದಿಟ್ಟಿತು.

ರೋಗಪೀಡಿತ ತೋಟಗಳ ಸಂತ್ರಸ್ತ ರೈತರ ಸಾಲಗಳನ್ನು ಮನ್ನಾ ಮಾಡಿ, ಬದಲಿ ಬೆಳೆಗಾಗಿ ಬೇರೆ ಜಮೀನು ಮಂಜೂರು ಮಾಡಿಸಿ, ಸಾಲ ಸೌಲಭ್ಯ ಒದಗಿಸುವುದು; ತಾಳೆ ಎಣ್ಣೆ ಯೋಜನೆಯನ್ನು ಈ ಪ್ರದೇಶಕ್ಕೂ ವಿಸ್ತರಿಸುವುದು ಹಾಗೂ ಈ ರೋಗದ ನಿವಾರಣೆ ಬಗ್ಗೆ ಸಂಶೋಧನೆ ನಡೆಸಲು ಈ ಪ್ರಾಂತ್ಯದಲ್ಲೇ ಒಂದು ಸಂಶೋಧನಾ ಕೇಂದ್ರ ಸ್ಥಾಪಿಸಿ, ಅಗತ್ಯ ಹಣ ಒದಗಿಸುವುದು ಮತ್ತು ಅದರ ಪ್ರಗತಿಯನ್ನು ಆಗಾಗ ರೈತರಿಗೆ ತಿಳಿಸುವುದು– ಇವು ರೈತರ ಪ್ರಮುಖ ಬೇಡಿಕೆಗಳಾಗಿದ್ದವು.

ತಾಳೆ ಎಣ್ಣೆ ಯೋಜನೆ ವಿಸ್ತರಣೆ ಮತ್ತು ಸಂಶೋಧನಾ ಕೇಂದ್ರ– ಇವುಗಳ ಬಗ್ಗೆ ಪ್ರಯತ್ನಿಸುವ ಭರವಸೆ ಕೊಟ್ಟ ಮುಖ್ಯಮಂತ್ರಿಗಳು, ಈ ಬಗ್ಗೆ ಪುನಃ ಬೆಂಗಳೂರಿಗೆ ಬಂದು ತಮ್ಮನ್ನು ಕಾಣಲು ನಿಯೋಗಕ್ಕೆ ತಿಳಿಸಿದ್ದಾರೆಂದು ಪ್ರಕಾಶ್ ತಿಳಿಸಿದ್ದಾರೆ

ಮಾರ್ಚ್ 25 ರಂದು ಕೊಪ್ಪದಲ್ಲಿ ನೂತನ ಮುನ್ಸಿಫ್ ಕೋರ್ಟ್ ಉದ್ಘಾಟನೆ

ಕೊಪ್ಪ : ಶೃಂಗೇರಿ ಮತ್ತು ಕೊಪ್ಪ ತಾ||ಗಳ ನ್ಯಾಯವಾದಿಗಳ ವರ್ಷಗಟ್ಟಲೆಯ ಪ್ರಯತ್ನವೊಂದು ಮಾ. ೨೫ ರಂದು ಯಶಸ್ಸು ಕಾಣಲಿದೆ. ಕೊಪ್ಪದ ಮುನ್ಸಿಫ್ ಮತ್ತು ಪ್ರಥಮ ದರ್ಜೆ ನ್ಯಾಯಾಲಯ ಅಂದು ಉದ್ಘಾಟನೆಗೊಳ್ಳಲಿದೆ

ವಿಧಾನಸಭಾಧ್ಯಕ್ಷ ಎಸ್.ಎಂ. ಕೃಷ್ಣ ರವರ ಅಧ್ಯಕ್ಷತೆಯಲ್ಲಿ ಹೈಕೋರ್ಟಿನ ಹಿರಿಯ ನ್ಯಾಯಾಧೀಶರಾದ ನ್ಯಾ|| ಕೆ. ರಾಮಚಂದ್ರಯ್ಯ ಉದ್ಘಾಟನೆ ನೆರವೇರಿಸುತ್ತಾರೆ. ಕೋರ್ಟಿಗಾಗಿ ನೂತನವಾಗಿ ಸಜ್ಜುಗೊಳ್ಳುತ್ತಿರುವ ಹಳೇ ಆಸ್ಪತ್ರೆ ಕಟ್ಟಡದಲ್ಲಿ ಅಂದು ಬೆಳಿಗ್ಗೆ ೧೧ ಗಂಟೆಗೆ ಈ ಸಮಾರಂಭ ನಡೆಯಲಿದೆ.

ಜಿಲ್ಲಾ ನ್ಯಾಯಾಧೀಶ ಬಿ. ಕೆ. ಸಂಗಳದ್ ಹಾಗೂ ನ ರಾ ಪುರ ಮತ್ತು ಕೊಪ್ಪದ ಮುನ್ಸಿಫ್ ನ್ಯಾಯಾಧೀಶರುಗಳು ಹಾಜರಿರುತ್ತಾರಲ್ಲದೆ, ಮಂತ್ರಿಗಳಾದ ಬಿ ಶಿವಣ್ಣ, ವೀರಪ್ಪಮೊಯ್ಲಿ, ಮಲ್ಲಿಕಾರ್ಜುನ ಪ್ರಸನ್ನ, ಶಾಸಕ ಯು. ಕೆ. ಶಾಮಣ್ಣ, ಜಿ.ಪ. ಅಧ್ಯಕ್ಷ ಬಿ ಎಲ್. ರಾಮದಾಸ್ ಮುಖ್ಯ ಅತಿಥಿಗಳಾಗಿರುತ್ತಾರೆ

ಪ್ರಗತಿಪರ, ಮಾನವೀಯ ಕಳಕಳಿಗಳುಳ್ಳವರ ಸಂಘಟನೆ 'ಬದುಕು ಬಳಗ'

ಕೊಪ್ಪ : ದೈವ-ಧರ್ಮಗಳ ಹೆಸರಿನ ಶೋಷಣೆ ದಬ್ಬಾಳಿಕೆಗಳನ್ನು, ಜಾತಿ-ಮತಗಳ ದ್ವೇಷ ಮತ್ತು ತಾರತಮ್ಯವನ್ನು, ದಲಿತರು, ಮಹಿಳೆಯರು ಮುಂತಾದವರ ಕುರಿತಾದ ಅವೈಜ್ಞಾನಿಕ, ಅಮಾನವೀಯ ನಂಬಿಕೆ ಮತ್ತು ಮೌಲ್ಯಗಳನ್ನು ಒಪ್ಪದಿರುವುದು; ಹಾಗೂ ಎಲ್ಲ 'ಧರ್ಮ'ಗಳಿಗಿಂತಲೂ ಮಿಗಿಲಾದ ಮನುಷ್ಯ ಧರ್ಮವನ್ನೊಪ್ಪಿ ಪ್ರತಿಪಾದಿಸುವುದು–ಮುಂತಾದ ಪ್ರಗತಿಪರ, ಮಾನವೀಯ ಕಳಕಳಿಗಳುಳ್ಳವರ ಸಂಘಟನೆಯಾಗಿ 'ಬದುಕು ಬಳಗ' ಎಂಬ ವೇದಿಕೆ ಕೊಪ್ಪದಲ್ಲಿ ಮಾ. ೧೦ ರಂದು ಆರಂಭಗೊಂಡಿದೆ.

ಹೇಮಲತಾ ಶೆಣೈ ಸಂಚಾಲಕಿಯಾಗಿಯೂ, ಟಿ. ಕೆ. ಹೇಮಲತಾ ಸಹ ಸಂಚಾಲಕಿ ಮತ್ತು ಎಸ್.ಎಸ್. ಭಟ್ ಖಜಾಂಚಿಯಾಗಿಯೂ ಆಯ್ಕೆಯಾಗಿದ್ದು, ಆರು ಜನ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಸದಸ್ಯರಾಗಿದ್ದಾರೆ.

ಪತ್ರಿಕೆಗೆ ಮತ್ತೊಂದು ರಜ

ಚಂದಾ ಸಂಗ್ರಹಣೆಯ ಪ್ರಯುಕ್ತ ತಾ|| ೨೪-೩-೯೧ರ 'ಮುಂಜಾವು' ಪ್ರಕಟವಾಗುವುದಿಲ್ಲ. ಓದುಗರು ಸಹಕರಿಸಬೇಕಾಗಿ ಕೋರಿಕೆ.

ಮೂರು–ನಾಲ್ಕು ವರ್ಷಗಳಿಂದ ಚಂದಾ ಹಣ (ಕೊಡುತ್ತೇವೆಂದು ಹೇಳುತ್ತಲೇ) ಬಾಕಿ ಉಳಿಸಿಕೊಂಡಿರುವ ಕೆಲವೇ ಜನ 'ಚಂದಾ'ದಾರರು ಈ ಬಾರಿ ತಪ್ಪದೆ ಚುಕ್ತಾ ಮಾಡಿ ಚಂದಾ ನವೀಕರಿಸುವರೆಂದು ಆಶಿಸಲಾಗಿದೆ. —ಸಂ.

ಕೊಪ್ಪ ಆಯುರ್ವೇದ ಕಾಲೇಜು ಮಾರ್ಚ್ ೧೮ರಂದು ಪುನರಾರಂಭ

ಕೊಪ್ಪ: ಇಲ್ಲಿನ ಆಯುರ್ವೇದ ಕಾಲೇಜಿನಲ್ಲಿ ಮಾ. ೧೬ರಂದು ಆಡಳಿತ ಮಂಡಳಿಗಳು, ಅಧ್ಯಾಪಕ ವೃಂದ, ಪೋಷಕರು, ಸ್ಥಳೀಯ ನಾಗರಿಕರು ಮತ್ತು ವಿದ್ಯಾರ್ಥಿಗಳ ಸಭೆ ನಡೆದು, ಮಾ ೧೮ರಿಂದ ಕಾಲೇಜು ಪುನರಾರಂಭಿಸಲು ತೀರ್ಮಾನಿಸಲಾಯಿತು.

ಈಗಾಗಲೇ ಆಯುರ್ವೇದ ಆಸ್ಪತ್ರೆಯನ್ನು ಹಳೇ ಅರಣ್ಯ ಇಲಾಖೆ ಕಟ್ಟಡಕ್ಕೆ (ಹೊಸ ಆಸ್ಪತ್ರೆ ಎದುರು) ಮಾ. ೧ರಿಂದ ಸ್ಥಳಾಂತರಿಸಿದ್ದು, ಸಾರ್ವಜನಿಕ ವಂತಿಗೆಯಿಂದ ಚೆನ್ನಾಗಿ ಸಜ್ಜುಗೊಳಿಸಲಾಗಿದೆ. ಇಲ್ಲಿ ಪ್ರತಿ ತಿಂಗಳೂ ವಿಶೇಷ ಚಿಕಿತ್ಸಾ ಶಿಬಿರಗಳನ್ನು ಸಹ ಏರ್ಪಡಿಸಲಾಗುವುದೆಂದು ಆಡಳಿತ ವರ್ಗ ತಿಳಿಸಿದೆ.

ಇದೇ ರೀತಿ, ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಕರ್ಯವನ್ನು ಕೂಡಲೇ ಪ್ರಾರಂಭಿಸುವಂತೆಯೂ, ತಮ್ಮ ಮಕ್ಕಳನ್ನು ೧೮ರಿಂದ ಕಾಲೇಜಿಗೆ ಕಳಿಸುವುದಾಗಿಯೂ ಪೋಷಕರು ಸಭೆಯಲ್ಲಿ ತಿಳಿಸಿದರು. ಸಭೆ ಸೌಹಾರ್ದಯುತವಾಗಿ ನಡೆಯಿತು.

(ವರದಿ: ಕೆ.ಎ. ಶಿವಾನಂದ)

ಕಳ್ಳ ನೋಟು ಚಲಾವಣೆ ಮಾಡುತ್ತಿದ್ದ ಇಬ್ಬರ ಬಂಧನ, ನೋಟು ವಶ

ನ. ರಾ. ಪುರ : ಕಳ್ಳ ನೋಟುಗಳ ಚಲಾವಣೆಯಲ್ಲಿ ತೊಡಗಿದ್ದ ಕೊಪ್ಪ ತಾಲ್ಲೂಕಿನ ಇಬ್ಬರು ಯುವಕರನ್ನು ಇಲ್ಲಿನ ಸಬ್‌ಇನ್ಸ್‌ಪೆಕ್ಟರ್ ಟಿ. ಆರ್ ಮಂಜುನಾಥಯ್ಯ ಮಾ. ೧೦ ರಂದು ಬಂಧಿಸಿ, ಅವರಿಂದ ೧೦ ರೂ. ಮೌಲ್ಯದ ೨೯೭ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿದ್ದಾರೆ

ಮಾಚಿಕೊಪ್ಪದ ಆನಂದಯ್ಯನವರ ಮಗ ಎಂ. ಎ ನಾಗರಾಜ (೩೬) ಮತ್ತು ಆರದಾಳು ವಾಸಿ ಕೃಷ್ಣ ಪೂಜಾರಿಯವರ ಮಗ, ಎಲೆ ವ್ಯಾಪಾರದ ಕೆ. ಸುಂದರ ಪೂಜಾರಿ (೨೭) ಇವರೇ ಬಂಧಿತ ಆರೋಪಿಗಳು. (ನಾಗರಾಜ ಚಿತ್ರ ನಟ ಅರವಿಂದ್‌ರ ಸೋದರ ಎಂದು ಹೇಳಲಾಗುತ್ತಿದೆ)

ಊರಿನಲ್ಲಿ ಮೂರು ನಾಲ್ಕು ದಿನದಿಂದ ಕಳ್ಳ ನೋಟು ಚಲಾವಣೆ ನಡೆಯುತ್ತಿದೆ ಎಂಬ ಸುಳಿವು ತಿಳಿದ ಪೋಲೀಸರು ಬಲೆ ಬೀಸಿದ್ದು, ಮಾ. ೧೦ರ ಸಂಜೆ ಅಂಗಡಿಯೊಂದರಲ್ಲಿ ಅಂಥ ನೋಟೊಂದು ಪತ್ತೆಯಾದಾಗ, ಅಂಗಡಿ ಮಾಲೀಕನನ್ನು ಕರೆದೊಯ್ದು ವಿಚಾರಿಸಲಾಗಿ ಈ ಆರೋಪಿಗಳು ಸಿಕ್ಕಿ ಬಿದ್ದರೆನ್ನಲಾಗಿದೆ.

ಶಿವಮೊಗ್ಗ ಮೆಗ್ಗಾನ್ ತಂಡಕ್ಕೆ ಎಂ. ಎಸ್. ದ್ಯಾವೇಗೌಡ ಸ್ಮಾರಕ ಕ್ರಿಕೆಟ್ ಪ್ರಶಸ್ತಿ

ಕೊಪ್ಪ : ಇಲ್ಲಿನ ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಷನ್ ಆಶ್ರಯದಲ್ಲಿ ಫೆ. ೨೮ರಿಂದ ಮಾ. ೮ರವರೆಗೆ ನಡೆದ ದಿ|| ಎಂ. ಎಸ್. ದ್ಯಾವೇಗೌಡ ಸ್ಮಾರಕ ಕ್ರಿಕೆಟ್ ಪಂದ್ಯಾವಳಿಯ ಛಾಂಪಿಯನ್‌ಶಿಪ್ ಪ್ರಶಸ್ತಿಯನ್ನು ಶಿವಮೊಗ್ಗದ ಮೆಗ್ಗಾನ್ಸ್ ತಂಡ ಚಿಕ್ಕಮಗಳೂರು ಮರ್ಚೆಂಟ್ಸ್ ತಂಡವನ್ನು [illegible] ರನ್ನುಗಳಿಂದ ಸೋಲಿಸುವ ಮೂಲಕ ೩ನೇ ಬಾರಿಗೆ ಗೆದ್ದುಕೊಂಡಿತು.

ಮೆಗ್ಗಾನ್ಸ್ ತಂಡ [illegible] ಓವರ್‌ಗಳಲ್ಲಿ [illegible] ರನ್ನು ಗಳಿಸಿದರೆ, ಚಿಕ್ಕಮಗಳೂರು ತಂಡ [illegible] ಓವರ್‌ಗಳಲ್ಲಿ [illegible] ರನ್ನುಗಳಿಗೆ ತನ್ನೆಲ್ಲಾ ವಿಕೆಟ್ ಕಳೆದುಕೊಂಡಿತು.

ಹೊನಲು ಬೆಳಕಿನ ಶಟಲ್ ಪಂದ್ಯಾವಳಿ

ಜಯಪುರ : ಇಲ್ಲಿನ ಮಲ್ನಾಡ್ ಸ್ಪೋರ್ಟ್ಸ್ ಕ್ಲಬ್ ಆಶ್ರಯದಲ್ಲಿ ದಿ|| [illegible] ಗೌಡರ ಸ್ಮಾರಕ [illegible] ಮೂರನೇ ವರ್ಷದ ಹೊನಲು ಬೆಳಕಿನ ಪುರುಷರ ಡಬಲ್ಸ್ ಷಟಲ್ ಬ್ಯಾಡ್ಮಿಂಟನ್ ಪಂದ್ಯಾವಳಿ [illegible] ನಡೆಯಲಿದೆ. [illegible]

[illegible]

ಕೃತಜ್ಞತೆಗಳು

ನಮ್ಮ ಸಂಸ್ಥೆಯ ವತಿಯಿಂದ ೨೮-೨-೯೧ರಿಂದ ೮-೩-೯೧ರವರೆಗೆ ನಡೆದ ದಿ|| ಎಂ. ಎಸ್. ದ್ಯಾವೇಗೌಡ ಸ್ಮಾರಕ ಕ್ರಿಕೆಟ್ ಟೂರ್ನಿಯ ಯಶಸ್ಸಿಗೆ ಸಹಕರಿಸಿದ ದಾನಿಗಳಿಗೂ, ಕ್ರೀಡಾಭಿಮಾನಿಗಳಿಗೂ, ಕ್ರೀಡಾಪಟುಗಳಿಗೂ ಕೃತಜ್ಞತೆಯನ್ನು ಅರ್ಪಿಸುತ್ತೇವೆ.

ಅಧ್ಯಕ್ಷರು ಮತ್ತು ಸದಸ್ಯರು,

ಫ್ರೆಂಡ್ಸ್ ಕ್ರಿಕೆಟ್ ಅಸೋಸಿಯೇಷನ್, ಕೊಪ್ಪ

ಸದ್ಗುರು ಪ್ರೌಢಶಾಲೆಯ ವೈಶಿಷ್ಟ್ಯಪೂರ್ಣ ಬೆಳ್ಳಿಹಬ್ಬದಲ್ಲಿ ಕುವೆಂಪು ವಿ. ವಿ. ಕುಲಪತಿ :

"ವಿದ್ಯೆಯಿಂದ ವ್ಯಕ್ತಿತ್ವ, ವ್ಯಕ್ತಿತ್ವದಿಂದ ಆತ್ಮವಿಶ್ವಾಸ"

"ಸ್ವತಂತ್ರ ವ್ಯಕ್ತಿತ್ವವನ್ನು ಹೊಂದಿದ ವ್ಯಕ್ತಿ ಪ್ರತಿಭಾವಂತನೆನಿಸಿಕೊಳ್ಳುವುದರ ಜೊತೆಗೆ ಪ್ರಸಿದ್ಧಿಯನ್ನೂ ಗಳಿಸುತ್ತಾನೆ ವಿದ್ಯೆ ಅಂಥ ಸ್ವತಂತ್ರ ವ್ಯಕ್ತಿತ್ವವನ್ನು ಬೆಳೆಸುತ್ತದೆ. ಗಟ್ಟಿ ವ್ಯಕ್ತಿತ್ವ, ಪ್ರಲೋಭನೆಗಳನ್ನು ಮೆಟ್ಟಿ ನಿಲ್ಲುವ ಹಾಗೂ ಆತ್ಮ ವಿಶ್ವಾಸ ಹೆಚ್ಚಿಸುವ ಸಾಮರ್ಥ್ಯವನ್ನು ಹೊಂದಿದೆ" ಎಂದು ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಡಾ|| ಎಂ.ಆರ್ ಗಜೇಂದ್ರಗಡ್ ಅವರು ಹೇಳಿದ್ದಾರೆ.

ಫೆಬ್ರವರಿ ೧೭ರಂದು, ಜಿಲ್ಲೆಯ ಉತ್ತಮ ಪ್ರೌಢಶಾಲೆಗಳಲ್ಲೊಂದೆಂದು ಖ್ಯಾತಿ ಪಡೆದಿರುವ ಬಸರೀಕಟ್ಟೆಯ ಸದ್ಗುರು ಪ್ರೌಢಶಾಲೆಯ ಬೆಳ್ಳಿಹಬ್ಬದ ಸಮಾರಂಭದಲ್ಲಿ ಪ್ರಧಾನ ಭಾಷಣಕಾರರಾಗಿ ಮಾತನಾಡಿದ ಅವರು, ಶಿಕ್ಷಣದ ಉದ್ದೇಶ ಯಶಸ್ವಿಯಾಗಬೇಕಾದರೆ ಶಿಕ್ಷಕ ವರ್ಗ, ಆಡಳಿತ ವರ್ಗ, ಪಾಲಕ ವರ್ಗ, ವಿದ್ಯಾರ್ಥಿ ವರ್ಗ ಮತ್ತು ಸಮಾಜ— ಈ ಐದು ಅಂಗಗಳೂ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು ಎಂದು ವಿಶ್ಲೇಷಿಸಿದರು

ಬಸರೀಕಟ್ಟೆಯಂತಹ ಮಲೆನಾಡಿನ ಮೂಲೆಗೆ ಭೇಟಿ ನೀಡಿದ ಪ್ರಥಮ ಕುಲಪತಿ ಎಂಬ ಹೆಗ್ಗಳಿಕೆಗೆ ಪಾತ್ರರಾದ ಡಾ|| ಗಜೇಂದ್ರಗಡ್‌ರವರು ಕನ್ನಡ, ಹಿಂದೀ, ಉರ್ದು, ಅರಬ್ಬಿ, ಇಂಗ್ಲೀಷ್ ಮುಂತಾದ ಹಲವು ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯ ಗಳಿಸಿರುವ ವ್ಯಕ್ತಿ. ಭಗವದ್ಗೀತೆ, ಕುರಾನ್, ಹಳೆಗನ್ನಡ, ಮಹಾಭಾರತ, ರಾಮಾಯಣ ಗಳಲ್ಲಿನ ಶ್ಲೋಕಗಳನ್ನು ತಮ್ಮ ಮಾತಿನ ನಡು ನಡುವೆ ಉದ್ಧರಿಸುತ್ತ ಅವರು ಮಾಡಿದ ಚೇತೋಹಾರಿ ಭಾಷಣ ಕೇವಲ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಮಾತ್ರ ಶಿವಿಮಾತು ಎನಿಸದೆ, ನೆರೆದಿದ್ದ ಸಹಸ್ರಾರು ಪೋಷಕರೂ ಅಭಿಮಾನದಿಂದ ತಲೆದೂಗುವಂತಿತ್ತು.

ಈ ಸಮಾರಂಭದಲ್ಲ ಸದ್ಗುರು ವಿದ್ಯಾ ಸಂಸ್ಥೆಯ ಹಿರಿಯ ಪದಾಧಿಕಾರಿಗಳಾದ ಜಿ. ಸುಬ್ಬರಾವ್, ಡಾ|| ಎಸ್. ಆರ್. ಶೆಟ್ಟಿ, ಬಿ. ರಾಮಚಂದ್ರಯ್ಯ, ಟಿ. ತಿಮ್ಮಪ್ಪಯ್ಯ ಮತ್ತು ಶಾಲಾ ಕಟ್ಟಡ ನಿರ್ಮಾಣಕ್ಕೆ ಸ್ಥಳದಾನ ಮಾಡಿದ ಮಾಡದಮನೆ ರಾಮಪ್ಪಯ್ಯನವರ ಪರವಾಗಿ ಅವರ ಪುತ್ರರನ್ನು ಹರಿಹರಪುರ ಮಠಾಧೀಶರು ಸನ್ಮಾನಿಸಿದರು.

ಸದ್ಗುರು ವಿದ್ಯಾ ಸಮಿತಿಯ ಅಧ್ಯಕ್ಷ ವರದೇಶಿಕಾಚಾರ್ಯ ರಂಗಪ್ರಿಯ ಸ್ವಾಮಿಗಳು ಸಮಿತಿಯ ಸ್ಥಾಪಕ ಅಧ್ಯಕ್ಷ ಬಿ. ರಾಮಕೃಷ್ಣ ಗುರುದಾಸ್‌ರವರ ಭಾವಚಿತ್ರ ಅನಾವರಣಗೊಳಿಸಿ, ಶಾಲಾ ಕಟ್ಟಡದ ನಿರ್ಮಾಣದಲ್ಲಿ ಭಾಗಿಗಳಾದ ದಾನಿಗಳನ್ನು ಸನ್ಮಾನಿಸಿದರು ಹಾಗೂ ನಿವೃತ್ತ ಅಧ್ಯಾಪಕರಿಗೆ ಸ್ಮರಣಿಕೆಗಳನ್ನು ನೀಡಿದರು

ಇದೇ ಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಆರಂಭಿಸಿ ಈಗ ಮೈಸೂರಿನ ಕೇಂದ್ರೀಯ ಆಹಾರ ಸಂಶೋಧನಾಲಯದಲ್ಲಿ ವಿಜ್ಞಾನಿಯಾಗಿರುವ ತಲವಾನೆಯ ಟಿ. ಶ್ರೀನಿವಾಸ್ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಜಿಲ್ಲಾ ಪರಿಷತ್ ಸದಸ್ಯೆ ಬಿ. ಸಿ. ಗೀತಾ ರಜತಮಹೋತ್ಸವದ ಅಂಗವಾಗಿ ನಡೆದ ಅಂತರ ಶಾಲಾ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು. ಸಾಹಿತಿ ಎಚ್. ವಿ. ಮಹಾಬಲಯ್ಯ ಪೋಷಕರ ಪರವಾಗಿ ಮಾತನಾಡಿದರು ರಜತ ಮಹೋತ್ಸವ ಸಮಿತಿಯ ಅಧ್ಯಕ್ಷ ಟಿ. ಆರ್ ನಾರಾಯಣ ಹೆಗ್ಡೆ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ,

(೬ನೇ ಪುಟಕ್ಕೆ)

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಶೃಂಗೇರಿಯವರು

ಮೊನ್ನೆ ಮಾರ್ಚ್ ೨ ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯದ ೭೧ನೇ ಘಟಿಕೋತ್ಸವದಲ್ಲಿ ಪದಕ, ಬಹುಮಾನ ಮುಂತಾದವನ್ನು ಗಳಿಸಿದವರಲ್ಲಿ ಶೃಂಗೇರಿ ಕಾಲೇಜಿನ ನಾಲ್ವರು ಸೇರಿದ್ದಾರೆ

ಕಾಲೇಜಿನಲ್ಲಿ ಹಾಲಿ ಹಿಂದಿ ಉಪನ್ಯಾಸಕರಾಗಿರುವ ಕಿಗ್ಗದ ಕೆ. ಎಂ. ಸುಬ್ರಮಣ್ಯ ಡಾಕ್ಟರೇಟ್ ಪದವಿಯನ್ನೂ, ಡಾ|| ರಾಮಚಂದ್ರರಾಯರ ಮಗಳು ಕೆ ಆರ್. ಸುಮನ ಸಸ್ಯ ಶಾಸ್ತ್ರ ಎಂ. ಎಸ್ಸಿಯಲ್ಲಿ ಮೊದಲ ರ್‍ಯಾಂಕ್ ಗಳಿಸಿದ್ದಕ್ಕೆ ಚಿನ್ನದ ಪದಕ ಮತ್ತು ಇತರ ಮೂರು ಪ್ರಶಸ್ತಿಗಳನ್ನೂ, ಬಿ. ಎಸ್ಸಿ ಯಲ್ಲಿ ಹತ್ತನೇ ರ್‍ಯಾಂಕ್ ಪಡೆದ ಕಲ್ಕಟ್ಟೆಯ ಎಚ್. ಎಂ ನಾಗರಾಜರಾವ್ ಮೈಸೂರು ಲೋಟರಿ ಕ್ಲಬ್. ಚಿನ್ನದ ಪದಕವನ್ನೂ ಹಾಗೂ ಶೃಂಗೇರಿಯಲ್ಲಿ ಎ ಇ ಒ ಆಗಿದ್ದ ಚಿನ್ನಪ್ಪನವರ ಮಗಳು ಕೆ. ಸಿ ಅನುಪಮ ಬಿ.ಎಸ್ಸಿ, ಪ್ರಾಣಿ ಶಾಸ್ತ್ರದಲ್ಲಿ ಅತಿ ಹೆಚ್ಚು ಅಂಕ ಗಳಿಸಿದ್ದಕ್ಕಾಗಿ ನಗದು ಬಹುಮಾನವನ್ನೂ ಗಳಿಸಿದರು.

ಸಚಿವ ವೀರಪ್ಪ ಮೊಯ್ಲಿ ಪ್ರಶಸ್ತಿಗಳನ್ನು ವಿತರಿಸಿದರು. ಬಾಹ್ಯಾಕಾಶ ಸಂಸ್ಥೆಯ ನಿರ್ದೇಶಕರಾದ ಪ್ರೊ|| ಯು. ಆರ್. ರಾವ್ ಮುಖ್ಯ ಅತಿಥಿಯಾಗಿದ್ದರು. (ವರದಿ : ಎಚ್. ಎಂ. ನಾಗರಾಜರಾವ್)

ಭದ್ರಾವತಿ ಆಕಾಶವಾಣಿಯಲ್ಲಿ ಶೃಂಗೇರಿ ಯಕ್ಷ ತಂಡಗಳ ಎರಡು ಕಾರ್ಯಕ್ರಮಗಳು

ಶೃಂಗೇರಿ : ಇಲ್ಲಿನ 'ಕಾಳಿಂಗ ಕಲಾವಿದರು' ಸಾಕ್ಷರತೆ ಕುರಿತು ರಚಿಸಿರುವ 'ಅನಕ್ಷರಾಸುರ ಮೋಕ್ಷ' ಎಂಬ ಯಕ್ಷಗಾನ ಮಾ. ೨೨ರ ಶುಕ್ರವಾರ ರಾತ್ರಿ ೮-೧೦ಕ್ಕೆ ಭದ್ರಾವತಿ ಆಕಾಶವಾಣಿಯಲ್ಲಿ ಪ್ರಸಾರವಾಗಲಿದೆ.

ಏಪ್ರಿಲ್ ೧ರ ಸೋಮವಾರ ರಾತ್ರಿ ೯-೩೦ ಕ್ಕೆ 'ಕಲಾರಂಗ'ದ ಎಸ್. ವಿ. ರಮೇಶ್ ಬೇಗಾರ್ ಮತ್ತು ವೆಂ. ಪ್ರಸನ್ನ ಅವರಿಂದ ಯಕ್ಷಗಾನದ ಇತಿಹಾಸ ಕುರಿತು 'ಚೆಂಡೆ ಮದ್ದಲೆಯ ಅಂತರಂಗ' ಎಂಬ ರೂಪಕ ಪ್ರಸಾರವಾಗಲಿದೆ.

ರಾಜ್ಯಮಟ್ಟದ ಕೆಸರುಗದ್ದೆ ಓಟ ಸ್ಪರ್ಧೆ

ಕೊಪ್ಪ : ರಾಜ್ಯಾದ್ಯಂತ ಈಗಾಗಲೇ ಖ್ಯಾತಿ ಗಳಿಸಿರುವ ಹಿರೇಗದ್ದೆಯ "ಕೆಸರು ಗದ್ದೆ ಓಟ" ಮತ್ತು ಹಗ್ಗ ಜಗ್ಗಾಟದ ('ಟಗ್ ಆಫ್ ವಾರ್') ಸ್ಪರ್ಧೆಗಳು ಈ ಬಾರಿ ಮಾ ೨೪ ರ ಭಾನುವಾರ ಮಧ್ಯಾಹ್ನ ೨ ೩೦ ಗಂಟೆಗೆ ನಡೆಯಲಿವೆ.

ಬಾಳೆಹೊನ್ನೂರು–ಮೇಲ್ಪಾಲ್ ರಸ್ತೆಯ ಅರಳಿಕೊಪ್ಪ ಸಮೀಪದ ಹಿರೇಗದ್ದೆಯಲ್ಲಿ ನಡೆಯುವ ರಾಜ್ಯ ಮಟ್ಟದ ಈ ಸ್ಪರ್ಧೆಗಳಲ್ಲಿ ಯುವಕ–ಯುವತಿಯರ ಎರಡೂ ವಿಭಾಗಗಳಿರುತ್ತವೆ. ಪ್ರವೇಶ ಶುಲ್ಕವಿಲ್ಲ ಹಗ್ಗ ಜಗ್ಗಾಟದ ಪ್ರತಿ ತಂಡದಲ್ಲಿ ೮ ಮಂದಿಗೆ ಮಾತ್ರ ಅವಕಾಶ. ಸ್ಪರ್ಧಿಗಳಿಗೆ ೨೪ ರಂದು ಉಚಿತ ಊಟ ವಸತಿ ಏರ್ಪಾಡಿದೆ ಆದರೆ ಪ್ರಯಾಣ ಭತ್ಯ ನೀಡಲಾಗುವುದಿಲ್ಲ.

ಆಸಕ್ತ ಸ್ಪರ್ಧಿಗಳು ಮತ್ತು ತಂಡಗಳು ತಾ|| ೨೨-೩-೯೧ರ ಸಂಜೆ ೫.೩೦ ರೊಳಗೆ ತಮ್ಮ ಹೆಸರನ್ನು ಜಿಲ್ಲಾ ಯುವಜನ ಸಮನ್ವಯಾಧಿಕಾರಿ, ನೆಹರು ಯುವ ಕೇಂದ್ರ ಚಿಕ್ಕಮಗಳೂರು ಅಥವಾ ಅಧ್ಯಕ್ಷರು, ಹಿರೇಗದ್ದೆ ಯುವಕ ಸಂಘ, ಕೊಪ್ಪ ತಾ|| ಇವರಲ್ಲಿ ನೊಂದಾಯಿಸಿ, ಮಾ. ೨೪ ರ ಮಧ್ಯಾಹ್ನ ೧ ಗಂಟೆಯೊಳಗೆ ಸ್ಪರ್ಧೆಯ ಸ್ಥಳದಲ್ಲಿ ಹಾಜರಿರಬೇಕು ಎಂದು ತಿಳಿಸಲಾಗಿದೆ.

ಭದ್ರಾವತಿಯಲ್ಲಿ ಯಶಸ್ವಿ ನೇತ್ರ ಜೋಡಣೆ

ಅಂಧರ ಬದುಕನ್ನು ಬೆಳಕಿನತ್ತ ಕೊಂಡೊಯ್ಯುವುದರಲ್ಲಿ ಉತ್ತಮ ಕಾರ್ಯ ನಿರ್ವಹಿಸುತ್ತಿರುವ ಭದ್ರಾವತಿಯ "ಐ ಡೊನೇಷನ್ ಸೊಸೈಟಿ"ಯು ಫೆ. ೮ ರಂದು ನಿಧನರಾದ ಚಂದ್ರಶೇಖರ್ ಎಂಬ ನೇತ್ರದಾನಿಯ ಕಣ್ಣುಗಳನ್ನು ಪಡೆದು ಇಬ್ಬರು ಕಾರ್ನಿಯಾ ಅಂಧರಿಗೆ ಯಶಸ್ವಿಯಾಗಿ ಅಳವಡಿಸಿದ್ದಾರೆ.

ಆಸಕ್ತ ನೇತ್ರದಾನಿಗಳು ಈ ಕೆಳಕಂಡ ವಿಳಾಸಗಳಲ್ಲಿ ನೇತ್ರದಾನಕ್ಕೆ ಹೆಸರನ್ನು ನೊಂದಾಯಿಸಬಹುದೆಂದು ಸಂಚಾಲಕರು ಕೋರಿದ್ದಾರೆ.

೧ ಡಾ|| ಸುರೇಶ್ ಇಸ್ಲೂರ್, ಸಹ್ಯಾದ್ರಿ ಆಸ್ಪತ್ರೆ, ಹಳೇ ತೀರ್ಥಹಳ್ಳಿ ರಸ್ತೆ, ಶಿವಮೊಗ್ಗ ಫೋನ್ : ೨೭೫೮

೨. ಡಾ|| ಪ್ರಶಾಂತ್ ಇಸ್ಲೂರ್, ಸಾಗರ್ ನರ್ಸಿಂಗ್ ಹೋಂ, ಆಚ್ಯುತ್ ರಾವ್ ಲೇಔಟ್, ಜೈಲ್ ಸರ್ಕಲ್ ಹತ್ತಿರ, ಶಿವಮೊಗ್ಗ, ಫೋನ್ : ೪೯೩೦.

೩. ಸಂಪತ್ ರಾಜ್ ಘಂಟಿಯ, ಸಂಚಾಲಕರು, ನೇತ್ರ ಸಂಗ್ರಹಣಾ ಘಟಕ, ಸಿ. ಎಸ್. ರಸ್ತೆ ಭದ್ರಾವತಿ, ಫೋನ್ : ೬೦೮೪.

ನೇತ್ರದಾನಿಗಳು ಮರಣಿಸಿದ ಕೂಡಲೇ ಅವರ ಬಂಧುಗಳು ಮೇಲ್ಕಂಡ ವಿಳಾಸದಾರರನ್ನು ಸಂಪರ್ಕಿಸಿದಲ್ಲಿ ಕೂಡಲೇ ಬಂದು ಕಾರ್ನಿಯಾ ಸಂಗ್ರಹಿಸಿಕೊಂಡು ಹೋಗುತ್ತಾರೆ

ನೆನಪಿರಲಿ : ನೇತ್ರದಾನ ಮಾಡಲು ಮುಂಚೆಯೇ ಹೆಸರು ನೊಂದಾಯಿಸಬೇಕೆಂದೇನೂ ಇಲ್ಲ ಮೃತರ ಸಂಬಂಧಿಗಳು ಕಣ್ಣನ್ನು ಸ್ವಯಂಪ್ರೇರಣೆಯಿಂದ ದಾನ ಮಾಡಬಹುದು. ಮರಣದ ನಂತರ ೬ ಗಂಟೆಯೊಳಗಾಗಿ ಕಣ್ಣನ್ನು ಸಂಗ್ರಹಿಸಿ, ೪೮ ಗಂಟೆಯೊಳಗಾಗಿ ಅಂಧರಿಗೆ ಜೋಡಿಸಬೇಕು.

"ನಮ್ಮ ಮರಣದ ನಂತರವೂ ನಾವು ಪ್ರಪಂಚವನ್ನು ನೋಡುತ್ತಾ ಇರಲು" ಇದೊಂದು ಒಳ್ಳೆಯ ಅವಕಾಶ !

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ :–

ಎಚ್. ಎ. ವಿ. ಹರಿಕೇಕರ್,

ಬಂಳಗಡಿ ರಸ್ತೆ, ಕೊಪ್ಪ.

ಮಹಿಳಾ ಸಂಘಟನೆ ರೂಪಿಸಲು ಸಭೆ

ಮಹಿಳೆಯನ್ನು ತೀವ್ರವಾಗಿ ಕಾಡುತ್ತಿರುವ ವರದಕ್ಷಿಣೆಯ ಸಮಸ್ಯೆ, ಬಲಾತ್ಕಾರ, ಸಾಮೂಹಿಕ ಅತ್ಯಾಚಾರ, ಅಪಮಾನಗೊಳಿಸುವಿಕೆ, ಗಂಡ ಬಿಟ್ಟು ಬಿಡುವುದು, ಜೀವನಾಂಶ ನಿರಾಕರಣೆ, ಗಂಡನ ಮನೆಯಲ್ಲಿ ಕಿರುಕುಳ ಮುಂತಾದ ಶೋಷಣೆಗಳ ನಿಜವಾದ ಪ್ರಕರಣಗಳಲ್ಲಿ, ಅಂಥ ನೊಂದ ಮಹಿಳೆಯರಿಗೆ ಸ್ವಲ್ಪವಾದರೂ ಸಹಾನುಭೂತಿ, ಸಹಕಾರಗಳನ್ನು ಸಾಧ್ಯವಿರುವ ಯಾವುದಾದರೂ ರೀತಿಯಲ್ಲಿ ನೀಡಲು ಮಹಿಳೆಯರ ಒಂದು ಸಂಘಟನೆ ಅಗತ್ಯವಿದೆ ಎಂದು ಅನ್ನಿಸಿದೆ.

ಇಂಥ ಸಂಘಟನೆಯೊಂದನ್ನು ಆರಂಭಿಸುವ ಸಲುವಾಗಿ ಇದೇ ತಾರೀಖು ೩೧-೩-೯೧ನೇ ಭಾನುವಾರ ಬೆಳಗ್ಗೆ ೧೧-೦೦ ಗಂಟೆಗೆ ಸರಿಯಾಗಿ ಕೊಪ್ಪದ ಟೌನ್ ಮಾಧ್ಯಮಿಕ ಶಾಲೆಯಲ್ಲಿ (ಮಹಿಳಾ ಸಮಾಜದ ಪಕ್ಕ) ಶೃಂಗೇರಿ, ಕೊಪ್ಪ, ನ. ರಾ. ಪುರ ತಾಲ್ಲೂಕುಗಳ ಆಸಕ್ತ ಮಹಿಳೆಯರ ಸಭೆಯೊಂದನ್ನು ಏರ್ಪಡಿಸಲಾಗಿದೆ ನ.ರಾ. ಪುರದ ವಕೀಲರಾದ ಶ್ರೀಮತಿ ಶಶಿಕಲಾ ಉದ್ಯಾವರ್‌ರವರು ಈ ಸಭೆಯಲ್ಲಿ ಭಾಗವಹಿಸುತ್ತಾರೆ.

ಈ ಸಭೆಗೆ ವೈಯಕ್ತಿಕವಾಗಿ ಯಾರಿಗೂ ಆಹ್ವಾನಗಳನ್ನು ಕಳಿಸುತ್ತಿಲ್ಲ; ಆಸಕ್ತಿಯಿರುವವರು ಸ್ವ-ಇಚ್ಛೆಯಿಂದ ಬಂದು ಪಾಲ್ಗೊಳ್ಳಬೇಕೆಂದು ಸಂಘಟಕರು ವಿನಂತಿಸಿದ್ದಾರೆ.

ಓದುಗರ ಪತ್ರಗಳು

ಹೇಳು-ಕೇಳುವವರಿಲ್ಲದವರ ಹಡಬಿಟ್ಟಿ ವರ್ತನೆ

೧೦ ಸಾವಿರ ರೂ.ವರೆಗಿನ ರೈತರ ಸಾಲಗಳನ್ನು ಮಾತಿನಂತೆ ಮನ್ನಾ ಮಾಡಲಿ

ಪ್ರಿಯರೆ,

ರೈತರ ಹತ್ತು ಸಾವಿರ ರೂಪಾಯಿ ವರೆಗಿನ ಸಹಕಾರಿ ಸಾಲ ಮನ್ನಾ ಎಂಬುದಾಗಿ ಕಾಂಗ್ರೆಸ್ಸಿನವರು ಪ್ರಚಾರ ಮಾಡಿ, ನವಿನ್ಮಂದ ಓಟು ಪಡೆದು ಬಹುಮತ ಪಡೆದು, ಗದ್ದುಗೆಯೇರಿ ಕುಳಿತರು. ಎರಡು ವರ್ಷ ಕಳೆದರೂ ಸಹಕಾರಿ ಸಂಘಗಳಿಗೆ ಯಾವ ಆದೇಶವನ್ನೂ ಕಳಿಸಿಲ್ಲ. ನಾವು ಚಾತಕ ಪಕ್ಷಿಯಂತೆ ಕಾಯುತ್ತಲಿದ್ದೇವೆ. ಸಂಘದವರು ಈಗ ಬಡ್ಡಿ ಮತ್ತು ಸುಸ್ತಿ ಬಡ್ಡಿ ಸೇರಿಸಿ, ಭರದಿಂದ ವಸೂಲು ಮಾಡಲು ಬರುತ್ತಿದ್ದಾರೆ. ಕೊಡದಿದ್ದರೆ ಜಫ್ತಿ ಮಾಡುವುದಾಗಿ ಹೇಳುತ್ತಾರೆ. ಸರ್ಕಾರದವರೇ ಈ ರೀತಿ ಮಾಡುವುದು ವಿಷಾದಕರ. ಸರ್ಕಾರಕ್ಕೇರಿರುವವರು ಇನ್ನಾದರೂ ಕೂಡಲೇ ಆಡಿದ ಮಾತನ್ನು ನಡೆಸಿಕೊಡಲಿ.

—ನೊಂದ ರೈತರು, ಹಾಲ್ಮುತ್ತೂರು

ಪ್ರಿಯರೆ,

ಈಗ್ಗೆ ಸುಮಾರು ಒಂದೆರಡು ವಾರಗಳಿಂದ ಶೃಂಗೇರಿ ಮತ್ತು ಸುತ್ತಮುತ್ತಲ ಹಳ್ಳಿಗಳಲ್ಲಿ ವಿದ್ಯುದ್ದೀಪ ಕಾಣಸಿಗುವುದೇ ಅಪರೂಪವಾಗಿಬಿಟ್ಟಿದೆ. ಹಗಲಂತೂ ಹೇಗೂ ಇಲ್ಲ. ಅದು ಅಭ್ಯಾಸವಾಗಿಬಿಟ್ಟಿದೆ ಬಿಡಿ! (ರೈತರಿಗೆ, ಅಕ್ಕಿ, ಅವಲಕ್ಕಿ ಮತ್ತು ಹಿಟ್ಟಿನ ಗಿರಣಿಗಳಿಗೆ ತೊಂದರೆ ಇದ್ದದ್ದೇ.) ಆದರೆ ಒಂದು ದಿನವೂ ಸಂಜೆ ೬ರಿಂದ ೧೦ ಗಂಟೆಯ ತನಕ ಕನಿಷ್ಠ ನಾಲ್ಕೈದು ಸರ್ತಿಯಾದರೂ ಕಣ್ಣು ಮುಚ್ಚಾಲೆ ಆಡದ ದಿನವೇ ಇಲ್ಲ. ವಿದ್ಯುತ್ ಬಿಲ್ ಕಟ್ಟುವುದು ನಾಲ್ಕು ದಿನ ತಡವಾದರೂ, ಹೇಳದೆ ಕೇಳದೆ ಬಂದು ಸರಬರಾಜು ಸಿಲ್ಲಿಸಿ (ಡಿಸ್ ಕನೆಕ್ಟ್) ಕೈ ತೊಳೆದುಕೊಳ್ಳುವ ಈ ಇಲಾಖೆಯ ಮಹಾಶಯರು ಬಳಕೆದಾರರಿಗೆ ತೊಂದರೆ ಆಗುವಾಗ ಕತ್ತೆ ಕಾಯುತ್ತಿದ್ದಾರೆಯೇ? ಅಥವಾ ಜನರ ತಾಳ್ಮೆ ಪರೀಕ್ಷಿಸುತ್ತಿದ್ದಲ್ಲಿ, ಅವರೇನೂ ಹೆದರಬೇಕಾದ್ದಿಲ್ಲ ಬಿಡಿ (ಅಷ್ಟು ಜಾಗ್ರತೆ ನಮ್ಮ ಜನ ತಾಳ್ಮೆಗೆಟ್ಟು ಇವರ ಮೈಮೇಲೆ ಬೀಳುವುದಿಲ್ಲ!)

ಎಲ್ಲಾ ಶಾಲಾ ಕಾಲೇಜುಗಳಲ್ಲಿ ಪರೀಕ್ಷೆ ಹತ್ತಿರ ಬರುತ್ತಿದೆ. ಇಡೀ ವರ್ಷ ಪಾಠ, ಪ್ರವಚನಗಳು ನಡೆಯುದ್ದೆ, ಈಗ 'ಯುದ್ಧಕಾಲೇ ಶಸ್ತ್ರಾಭ್ಯಾಸ' ನಡೆಸಲೇಬೇಕಾಗಿರುವ ಹೆಚ್ಚಿನ ವಿದ್ಯಾರ್ಥಿಗಳಿಗೆ ಈ ಸಮಯದಲ್ಲೂ ಸರಿಯಾಗಿ ವಿದ್ಯುತ್ ಇಲ್ಲದಿದ್ದರೆ ಓದುವ, ಪರೀಕ್ಷೆ ಪಾಸು ಮಾಡುವ ಪರಿಯೆಂತು?

ಇನ್ನೊಂದು ನಮ್ಮ ರೈತರದು. ಅವರಿಗೆ ವರ್ಷಕ್ಕೆ ಒಂದೇ ಬೆಳೆ (ವಾಣಿಜ್ಯ ಬೆಳೆ) ಬರುವುದು. ಸಂಬಳದ ಹಾಗೆ ಪ್ರತಿ ತಿಂಗಳೂ ಕೈಗೆ ಬರುವಂಥದಲ್ಲ. ಈಗ ಅಡಿಕೆ ಸಿಂಗಾರ ಬೀಸುವ, ಕಾಫಿ ಕಾಯಿ ಕಟ್ಟುವ ಕಾಲ. ಈಗಲೂ ನೀರು ಕೊಡದಿದ್ದರೆ ಬರುವ ಫಸಲಿನಲ್ಲಿ ಖೋತಾ ಖಂಡಿತ. ಈ ನಷ್ಟವನ್ನು ಯಾರು ತುಂಬುತ್ತಾರೆ? ಅತ್ತ ವಿದ್ಯುತ್ತೇ ಇಲ್ಲದಿದ್ದರೆ ಬೇರೇನಾದರೂ ವ್ಯವಸ್ಥೆಯನ್ನಾದರೂ ಮಾಡಿಕೊಳ್ಳುತ್ತಿದ್ದರು.

ಈಗ ಬಳ್ಳೆ ಸ್ವಿಚ್ ಕೆ.ಇ.ಬಿ. ಕಚೇರಿ [illegible] ವಿದ್ಯುತ್ ಬಂದಾಗಲಾದರೂ [illegible] ಯಾಗಿ ಬರುತ್ತದೆಯೇ, [illegible] ನಿಂತಿರುತ್ತದೆ. ವರ್ಷಂಪ್ರತಿ ಈ [illegible] ರಾಗವನ್ನೇ ಏಕೆ [illegible] ಎನ್ನುವುದೇ ಅರ್ಥವಾಗುವುದಿಲ್ಲ.

ಇಷ್ಟರಿಂದ ಇನ್ನಾದರೂ ಈ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, [illegible] ವಿದ್ಯುತ್ ಕಡಿತಗೊಳಿಸುವುದನ್ನು ಬಿಟ್ಟು ಆದಷ್ಟು ಸಮಯವನ್ನಾದರೂ [illegible] ಗೊಳಿಸಲಿ. ಅಥವಾ ತಾಂತ್ರಿಕ ತೊಂದರೆಗಳೇ ಈ ಎಲ್ಲಾ ದುರವಸ್ಥೆಗೆ ಕಾರಣವಾದರೆ ಅದನ್ನು ಸರಿಪಡಿಸುವುದು ಬಿಟ್ಟು ಈ ಹಡಬಿಟ್ಟಿ ವರ್ತನೆ ಏಕೆ?

—ವೈ. ಗ. ಜಗದೀಶ್,
ವೈ ಕುಂಬ್ರಪುರ.

ಮಂಡಲ ಸದಸ್ಯತ್ವಕ್ಕೆ ರಾಜೀನಾಮೆ

ಪ್ರಿಯರೆ,

ಹೇರೂರು ಮಂಡಲ ಪಂಚಾಯಿತ್ತಿ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ. ಅಭಿವೃದ್ಧಿ ಕಾಮಗಾರಿಗಳ ಬಗ್ಗೆ ನಾನು ಹಲವು ಬಾರಿ ಕೊಟ್ಟ ಸಲಹೆಗಳಿಗೆ ಈವರೆಗೂ ನಿರ್ಲಕ್ಷ್ಯವೇ ಉತ್ತರವಾಗಿದೆ.

ಅಭಿವೃದ್ಧಿ ಕಾಮಗಾರಿಗಳು ಸ್ಥಗಿತಗೊಂಡಿರುವಾಗ ನಾನೊಬ್ಬ ಮಂಡಲ ಸದಸ್ಯನಾಗಿ ಮತದಾರರಿಗೆ ಉತ್ತರ ಹೇಳುವುದು ನನಗೆ ತುಂಬಾ ಕಷ್ಟಕರವಾಗಿದೆ.

ಇದರಿಂದ ನನ್ನ ಮನಸ್ಸಿಗೆ ತುಂಬಾ ನೋವಾಗಿದ್ದು, ನಾನು ಮಂಡಲ ಸದಸ್ಯನಾಗಿ ಮುಂದುವರಿಯಲು ಇಷ್ಟವಿಲ್ಲದ ಕಾರಣ ರಾಜೀನಾಮೆ ಪತ್ರ ಸಲ್ಲಿಸಿದ್ದೇನೆ.

ನನ್ನ ಸದಸ್ಯತ್ವದ ಅವಧಿಯಲ್ಲಿ ನನಗೆ ಸಹಕಾರ ಕೊಟ್ಟಿದ್ದಕ್ಕೆ ಪ್ರಧಾನರಿಗೂ ಇತರ ಸದಸ್ಯರು ಮತ್ತು ಸಿಬ್ಬಂದಿಗಳಿಗೂ ಕೃತಜ್ಞತೆಗಳು.

—ಕೆ. ರಾಮೇಗೌಡ,
ಕುಕ್ಕುಡಿಗೆ, ಹೇರೂರು.

ಕೊಪ್ಪಕ್ಕೊಂದು ಅಗ್ನಿಶಾಮಕ ದಳ ಬೇಕು

ಪ್ರಿಯರೆ,

ಇದೀಗ ಬೇಸಿಗೆ. ಮಲೆನಾಡಿನ ಕಾಡುಗಳಲ್ಲಿ ಕಾಡ್ಗಿಚ್ಚಿನ ಹಾವಳಿ ಹೆಚ್ಚು. ಅಲ್ಲದೆ ಬೆಂಕಿ ಆಕಸ್ಮಿಕದಿಂದ ಮನೆ-ಗುಡಿಸಲುಗಳು ಸುಟ್ಟು ಹೋಗುವುದೂ ಹೆಚ್ಚು. ಕಳೆದ ಒಂದು-ಒಂದೂವರೆ ತಿಂಗಳಲ್ಲಿ ಈ ಸುತ್ತಮುತ್ತ ಹತ್ತಾರು ಬೆಂಕಿ ಆಕಸ್ಮಿಕಗಳಾಗಿವೆ.

ಆದರೆ ಅಗ್ನಿಶಾಮಕ ದಳದ ಸೌಲಭ್ಯವಿರುವ ಶಿವಮೊಗ್ಗ ಅಥವಾ ಚಿಕ್ಕಮಗಳೂರಿನಿಂದ ೯೦ರಿಂದ ೧೧೦ ಕಿ.ಮೀ. ದೂರದಲ್ಲಿರುವ ಮಲೆನಾಡಿನ ಶೃಂಗೇರಿ, ಕೊಪ್ಪ ತಾಲ್ಲೂಕಿನ ಊರುಗಳಿಗೆ ಅಗ್ನಿಶಾಮಕಗಳು ಬರಬೇಕಾದರೆ ಕನಿಷ್ಠ ೩ ಗಂಟೆಗಳಾದರೂ ಬೇಕಾಗುತ್ತದೆ. ಅಷ್ಟರಲ್ಲಿ, ಬೆಂಕಿಗಾಹುತಿಯಾದ ಮನೆ ಮಠ, ಆಸ್ತಿಪಾಸ್ತಿಯೆಲ್ಲ ಭಸ್ಮವಾಗಿರುತ್ತವೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಮುಖ ಕೇಂದ್ರಗಳಲ್ಲೊಂದಾಗಿರುವ ಕೊಪ್ಪವು, ಪಕ್ಕದ ತಾಲ್ಲೂಕುಗಳಾದ ನರಸಿಂಹರಾಜಪುರ, ಶೃಂಗೇರಿ ಮತ್ತು ತೀರ್ಥಹಳ್ಳಿ ತಾಲ್ಲೂಕುಗಳಿಗೂ [illegible] ತಾಲ್ಲೂಕಿನ [illegible] ಹೊನ್ನಾರಿಗೆ ಕೇವಲ ೩೦ರಿಂದ [illegible] ಕಿಲೋಮೀಟರುಗಳ ದೂರದಲ್ಲಿರುವ ಊರಾಗಿದ್ದು, ಇಲ್ಲಿ ಒಂದು ಅಗ್ನಿಶಾಮಕ ದಳದ ಕೇಂದ್ರವನ್ನು ಪ್ರಾರಂಭಿಸಿದಲ್ಲಿ, ಈ ಭಾಗದ ಜನತೆಗೆ ಹೆಚ್ಚಿನ ಅನುಕೂಲ ಕಲ್ಪಿಸಿದಂತಾಗುತ್ತದೆ. ಈ ಸುತ್ತಮುತ್ತಲಿನ ಯಾವುದೇ ಗ್ರಾಮಾಂತರ ಪ್ರದೇಶದಲ್ಲಿ ಬೆಂಕಿ ಆಕಸ್ಮಿಕವಾದರೂ ಕಡಿಮೆ ಕಾಲಾವಧಿಯಲ್ಲಿ [illegible] ತಲುಪಬಹುದಾಗಿರುತ್ತದೆ.

ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಶಾಸಕರು ಈ ಬಗ್ಗೆ ತೀವ್ರ ಕ್ರಮ ಕೈಗೊಂಡು, ಜನರ ಬಹುಕಾಲದ ಈ ಬೇಡಿಕೆಯನ್ನು ಈಡೇರಿಸಬೇಕಾಗಿ ಹಾರ್ದಿಕವಾಗಿ [illegible] ಮನವಿ.

—ಬಿ. ಎಲ್. ಅಶೋಕರಾವ್,
ಕೊಪ್ಪ.

ಪ್ರತಿಭಾವಂತ ಅನಿಲ್‌ಗೆ ಹಾರ್ದಿಕ ಅಭಿನಂದನೆ

ಪ್ರಿಯರೆ,

ಆಕಾಶವಾಣಿಯವರು ನಡೆಸಿದ 'ರಸಪ್ರಶ್ನೆ' ಸ್ಪರ್ಧೆಯಲ್ಲಿ ಹರಿಹರಪುರ ಕಿರಿಯ ಕಾಲೇಜಿನ ಕೆ. ಎಸ್. ಅನಿಲ್‌ಕುಮಾರ್ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ್ದು ('ಮುಂಜಾವು' ೩.೩.೯೧) ತಿಳಿದು ತುಂಬಾ ಸಂತೋಷವಾಯಿತು.

ಅನಿಲ್‌ಕುಮಾರ್ ಗಳಿಸಿದ ಈ ಯಶಸ್ಸಿಗೆ ತುಂಬು ಹೃದಯದ ಹಾರ್ದಿಕ ಅಭಿನಂದನೆಗಳು.

ಭಾಷಣ, ಚರ್ಚಾಸ್ಪರ್ಧೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಸತತವಾಗಿ ಯಶಸ್ಸು ಗಳಿಸುತ್ತಿರುವ ಈ ಕಿರಿಯ ಪ್ರತಿಭಾವಂತನಿಗೆ ಇನ್ನೂ ಹೆಚ್ಚಿನ ಯಶಸ್ಸು, ಪ್ರೋತ್ಸಾಹಗಳು ಸಿಗಲೆಂದು ಹಾರೈಸುವೆ.

—ಶಂ. ನ. ಶೇಷಗಿರಿ,
ಜಯಪುರ

ಕನ್ನಡ ಅಂಕಿಗಳನ್ನೇ ಬಳಸಿ
೦ ೧ ೨ ೩ ೪ ೫ ೬ ೭ ೮ ೯

ಶೃಂಗೇರಿ ಲಯನ್ಸ್ ಕ್ಲಬ್‌ನಿಂದ ಬೃಹತ್ ಉಚಿತ ನೇತ್ರ ಚಿಕಿತ್ಸಾ ಶಿಬಿರ

ಶೃಂಗೇರಿಯ ಲಯನ್ಸ್ ಸಂಸ್ಥೆ ಇದೇ ಏಪ್ರಿಲ್ ೨ ರಿಂದ ೯ ರವರೆಗೆ ಒಂದು ವಾರ ಕಾಲ ಕಣ್ಣಿನ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರವನ್ನು ಶೃಂಗೇರಿಯ ಧನ್ವಂತರಿ ಆಸ್ಪತ್ರೆಯಲ್ಲಿ ಏರ್ಪಡಿಸಿದೆ.

ಮೈಸೂರು ಕೆ. ಆರ್. ಆಸ್ಪತ್ರೆಯ ಸಂಚಾರಿ ನೇತ್ರ ಚಿಕಿತ್ಸಾ ವಿಭಾಗದ ಖ್ಯಾತ ನೇತ್ರ ತಜ್ಞರಾದ ಡಾ|| ಎಚ್. ಟಿ. ಮಂಜೇಗೌಡ ಹಾಗೂ ಮಲ್ಲೇಗೌಡ ಸಾರ್ವಜನಿಕ ಆಸ್ಪತ್ರೆಯ ಸಂಚಾರಿ ನೇತ್ರ ಚಿಕಿತ್ಸಾಲಯದ ನೇತ್ರ ತಜ್ಞರಾದ ಡಾ|| ಕೆ. ಎಲ್. ನಾರಾಯಣ ಮೂರ್ತಿ ಇವರುಗಳು ತಮ್ಮ ತಂಡದೊಡನೆ ಚಿಕಿತ್ಸೆ ನೀಡಲು ಒಪ್ಪಿಕೊಂಡಿದ್ದಾರೆ.

ಇದಕ್ಕೆ ಮುಂಚಿತವಾಗಿ ಕಣ್ಣಿನ ದೋಷವಿರುವವರ ಕಣ್ಣು ಪರೀಕ್ಷೆಗಳನ್ನು ನಡೆಸಿ, ಶಸ್ತ್ರ ಚಿಕಿತ್ಸೆಯ ಅಗತ್ಯವಿರುವವರನ್ನು ಆಯ್ದು, ಅವರಿಗೆ ಗುರುತಿನ ಚೀಟಿ ಕೊಡಲಾಗುವುದು. ಈ ಕಾರ್ಯವನ್ನು ಈ ಕೆಳಗಿನ ದಿನಾಂಕಗಳಂದು ಆಯಾ ಊರುಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ಡಾ|| ಕೆ. ಎಲ್. ನಾರಾಯಣ ಮೂರ್ತಿಯವರು ನೆರವೇರಿಸಲಿದ್ದಾರೆ:

ಬಾಳೆಹೊನ್ನೂರು - ೨೫-೩-೯೧, ಸೋಮವಾರ ಬೆಳಗ್ಗೆ ೧೦ ರಿಂದ ೧ ಗಂಟೆವರೆಗೆ; ನ ರಾ ಪುರ-ಅದೇ ದಿನ ಮಧ್ಯಾಹ್ನ ೩ ರಿಂದ ೫ ರವರೆಗೆ; ಕೊಪ್ಪ - ೨೬-೩-೯೧ ಮಂಗಳವಾರ ಬೆಳಗ್ಗೆ ೯ ರಿಂದ ೧೧; ಜಯಪುರ-ಅದೇ ದಿನ ಮಧ್ಯಾಹ್ನ ೩ ರಿಂದ ೫ ಹಾಗೂ ಶೃಂಗೇರಿ-೨೭-೩-೯೧ ಬುಧವಾರ ಬೆಳಗ್ಗೆ ೯ರಿಂದ ಸಂಜೆ [illegible]

ಪ್ರಯೋಜನ [illegible]

[illegible] ಆಸ್ಪತ್ರೆಯಲ್ಲಿ [illegible] ಮಾಡಿಸಿಕೊಳ್ಳಬೇಕು. ಶಸ್ತ್ರ ಚಿಕಿತ್ಸೆಗೆ ಆಯ್ಕೆಯಾದವರು ತಮ್ಮ ಗುರುತಿನ ಚೀಟಿಯೊಂದಿಗೆ [illegible] ಧನ್ವಂತರಿ ಆಸ್ಪತ್ರೆಗೆ ಬಂದು ಸೇರಬೇಕು.

[illegible]

[illegible] ಶಸ್ತ್ರ ಚಿಕಿತ್ಸೆ [illegible]

(ಮುಂದಿನ ಪುಟಕ್ಕೆ)

ಗುಬ್ಬಗದ್ದೆ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆ ಆರಂಭ; ಮುಂದೂಡಿಕೆ

ಕೊಪ್ಪ : ಗುಬ್ಬಗದ್ದೆ ಕಾಡಿನ ಅಕ್ರಮ ಕಡಿತಲೆಗೆ ಚಿಕ್ಕಮಗಳೂರಿನ ಸಿವಿಲ್ ನ್ಯಾಯಾಲಯ ನೀಡಿರುವ ನಿರ್ಬಂಧಾಜ್ಞೆಯ ತೆರವಿಗಾಗಿ ಮರ ವ್ಯಾಪಾರಿಗಳು ಹೈಕೋರ್ಟ್‌ಗೆ ಸಲ್ಲಿಸಿರುವ ಅಪೀಲಿನ ವಿಚಾರಣೆ ಫೆ. ೧೩ ರಂದು ಆರಂಭವಾಗಿ, ಮರ ವ್ಯಾಪಾರಿಗಳ ಮತ್ತು ಪರಿಸರ ವೇದಿಕೆಯ ವಕೀಲರುಗಳ ವಾದ ಮಂಡನೆ ಮುಗಿದಿದೆ. ಸರ್ಕಾರಿ ವಕೀಲರ ವಾದ ಮಂಡನೆ ಆಗಬೇಕಿದೆ.

ಪ್ರಕರಣ ಮತ್ತೆರಡು ಬಾರಿ ಮುಂದೂಡಲ್ಪಟ್ಟಿದ್ದು ಮಾ. ೨೨ ರಂದು ಪುನಃ ವಿಚಾರಣೆಗೆ ಬರಲಿದೆ.

ಕೊಪ್ಪ ತಾಲ್ಲೂಕಿಗೆ ಆಂಬ್ಯುಲೆನ್ಸ್‌ಗಾಗಿ ಒತ್ತಾಯ

ಕೊಪ್ಪ : ಈ ತಾಲ್ಲೂಕಿನಲ್ಲಿ ಆರೋಗ್ಯ ಇಲಾಖೆಗೆ ಒಂದು ಆಂಬ್ಯುಲೆನ್ಸ್ ಇಲ್ಲದೆ ಬಹಳ ತೊಂದರೆಯಾಗಿದ್ದು, ಕೂಡಲೇ ಒಂದು ಆಂಬ್ಯುಲೆನ್ಸ್ ಮಂಜೂರು ಮಾಡುವಂತೆ ಜಿಲ್ಲಾ ಪರಿಷತ್ತನ್ನು ಕೋರಲು ಈ ತಿಂಗಳ ತಾ. ಪಂ ಸ. ಸಭೆ ನಿರ್ಣಯಿಸಿದೆ

ಗ್ರಾಮೀಣ ನೈರ್ಮಲ್ಯ ಕಾರ್ಯಕ್ರಮದನ್ವಯ ಈಗಾಗಲೇ ಮಂಜೂರಾತಿ ನೀಡಿರುವ ಮಂಡಲಗಳಲ್ಲದೆ ಉಳಿದ ಮಂಡಲಗಳಲ್ಲೂ ಶೌಚಾಲಯ ನಿರ್ಮಿಸಲು ತೀರ್ಮಾನಿಸಲಾಯಿತು.

ಪ್ರತಿ ಮಂಡಲದಲ್ಲೂ ಒಂದೊಂದು ಹರಿಜನ ಕಾಲೊನಿಗೆ ಒಂದೊಂದು ತೆರೆದ ಬಾವಿ ಮಂಜೂರು ಮಾಡುವಂತೆ ಜಿಲ್ಲಾ ಪರಿಷತ್ತನ್ನು ಕೋರಲಾಯಿತು.

ಶೃಂಗೇರಿಯಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ

(ಹಿಂದಿನ ಪುಟದಿಂದ)

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಕಂಡ ಯಾರನ್ನಾದರೂ ಸಂಪರ್ಕಿಸಬಹುದು : ಕೆ. ವಿ. ರಾಮಪ್ಪಯ್ಯ, ಲಯನ್ಸ್ ಅಧ್ಯಕ್ಷರು, ಎಚ್. ಎಸ್. ಸಿದ್ದಪ್ಪ, ಕಾರ್ಯದರ್ಶಿ, ಎಂ. ಕೆ. ನಾಗರಾಜ್, ಖಜಾಂಚಿ, ಡಾ|| ವಿಠಲ ಶೆಟ್ಟಿ, ಶಿಬಿರದ ಅಧ್ಯಕ್ಷರು ಅಥವಾ ಸತೀಶ ಭಟ್, ಕೇಶವ್ ಮೆಡಿಕಲ್ಸ್, ಶೃಂಗೇರಿ.

ಕಣ್ಣಿನ ತೊಂದರೆ ಇರುವವರು ಕಣ್ಣಿನ ಪರೀಕ್ಷೆ ಮತ್ತು ಚಿಕಿತ್ಸೆಯ ಈ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.



ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು : ಮಂಗಳೂರು-575 00

ಶಾಖೆ : ಜಯಪುರ

ತಾ|| 14-3-199

ಹರಾಜು ನೋಟೀಸು

ಈ ಕೆಳಗಿನ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ವಾಯಿದೆಗೆ ಸರಿಯಾಗಿ ಮರುಪಾವತಿ ಮಾಡದೆ ಇದ್ದುದರಿಂದ ಸದ್ರಿಯವರಿಗೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಿದ್ದಂತೆ, ಕೆಲವರಿಗೆ ಕಳುಹಿಸಿದ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ ಸದ್ರಿಯವರಿಗೆ ಮತ್ತು ಅವರ ವಾರಿಸುದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಸಾಲದ ಬಾಬ್ತು ಬ್ಯಾಂಕಿಗೆ ಸಲ್ಲತಕ್ಕ ಮೊಬಲಗನ್ನು ಇದೇ ತಾರೀಖು. 8-4-91ರ ಒಳಗೆ ಬ್ಯಾಂಕಿಗೆ ಮರುಪಾವತಿ ಮಾಡಲು ತಪ್ಪಿದಲ್ಲಿ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ಆಭರಣಗಳನ್ನು ತಾರೀಖು 9-4-91 ಅಪರಾಹ್ನ ಗಂಟೆ 3-00 ಕ್ಕೆ ಸರಿಯಾಗಿ ಬ್ಯಾಂಕಿನ ವಠಾರದಲ್ಲಿ ಬಹಿರಂಗ ಹರಾಜು ಮಾಡಲಾದೀತು. ಅಥವ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗ ಅಥವ ಖಾಸಗಿಯಾಗಿ ಹರಾಜು ಮಾಡಲಾದೀತು. ಮತ್ತು ಈ ಹರಾಜಿನಲ್ಲಿ ಬಂದ ಹಣವನ್ನು ಪ್ರತ್ಯಕ್ಷ ಮತ್ತು ಪರೋಕ್ಷ ಸಾಲಗಳಿಗೆ ಜಮಾ ಮಾಡಲಾಗುವುದು. ಈ ಸಂಬಂಧ ಬ್ಯಾಂಕಿಗೆ ಉಂಟಾಗಬಹುದಾದ ಸಕಲ ಖರ್ಚು ಮತ್ತು ನಷ್ಟವನ್ನು ತೆರಲು ಸದ್ರಿ ಸಾಲಗಾರರು ಜವಾಬ್ದಾರರಾಗಿರುತ್ತಾರೆ ತಿಳಿದಿರಲಿ.

ಕ್ರಮ ಸಂಖ್ಯೆ	ಸಾಲದ ನಂಬರು	ಸಾಲಗಾರರ ಹೆಸರು ಮತ್ತು ವಿಳಾಸ	ಮೊಬಲಗು (31-12-90 ರ ವರೆಗಿನ ಬಡ್ಡಿ ಸೇರಿ)
1.	252/87	ಶ್ರೀ ಈಶ್ವರೀ ಗೌಡ, ಬಿನ್ ಪುಪ್ಪೇಗೌಡ ಟೀಚರ್, ಎಲ್. ಪಿ. ಎಸ್., ಕುಂದೂರು.	1680-00
2.	259/87	ಶ್ರೀ ಕೊರಗ ಪೂಜಾರಿ, ಬಿನ್ ಚಂದು ಪೂಜಾರಿ ಕೊಳಗೋಡು, ಆಗಳಗಂಡಿ ಅಂಚೆ.	2048-00
3.	36/88	ಶ್ರೀ ಮುನಿಯಪ್ಪ ಬಿನ್ ರಾಮಸ್ವಾಮಿ ಜಲದುರ್ಗ, ಜಯಪುರ.	903-00
4.	38/88	ಶ್ರೀ ಶೇಖರ ಶೆಟ್ಟಿ, ಬಿನ್ ಗೋಪಾಲ ಶೆಟ್ಟಿ, ಹೆದ್ಸೆ, ಲೋಕನಾಥಪುರ ಅಂಚೆ.	403-00
5.	82/88	ಶ್ರೀ ಎಚ್.ಎಸ್. ವೆಂಕಟೇಶ ಭಟ್ಟ, ಬಿನ್ ಎಚ್.ಆರ್. ನಾಗಭೂಷಣಭಟ್ಟ, ಹಾಲಂದೂರು, ಅಡ್ಡಗದ್ದೆ ಅಂಚೆ.	2589-00
6.	100/88	ಶ್ರೀ ಚಿನ್ನಯ್ಯ ಆಚಾರಿ, ಬಿನ್ ಕಾಳಾಚಾರಿ, ಆರಗೊಡಿಗೆ, ಕೊಳಲೆ ಗ್ರಾಮ, ಮೇಗರಮಕ್ಕಿ, ನರಸಿಂಹರಾಜಪುರ ತಾಲ್ಲೂಕು.	650-00
7.	126/88	ಶ್ರೀ ಎ. ಆನಂದ ಪೂಜಾರಿ, ಬಿನ್ ಅಣ್ಣು ಪೂಜಾರಿ, ಸೋಮೇಶ್ವರಖಾನ್, ಹೊನ್ನೆಗುಂಡಿ ಗ್ರಾಮ, ಬಸರಿಕಟ್ಟೆ.	3501-00
8.	144/88	ಶ್ರೀ ಜಿ. ವಿ. ಮಂಜಪ್ಪ ಬಿನ್ ವೆಂಕೇಗೌಡ, ಕಲ್ಲುಗುಡ್ಡೆ.	784-00
9.	151/88	ಶ್ರೀ ಕೆ ಟಿ. ಸತೀಶ, ಬಿನ್ ತಮ್ಮಣ್ಣ ಗೌಡ, ಕೌಳಿ, ಜಯಪುರ.	4390-00
10.	158/88	ಶ್ರೀ ಡಿ. ಬಸಪ್ಪ ಬಿನ್ ಭೈರಪ್ಪ, ಅನಿತಾಂಜಲಿ ಎಸ್ಟೇಟ್, ಜಲದುರ್ಗ, ಜಯಪುರ.	1326-00
11.	184/88	ಶ್ರೀ ಎಂ. ಆರ್. ಸುರೇಂದ್ರ, ಬಿನ್ ರಾಮೇ ಗೌಡ, ಮುಂಡೋಳು, ಜಯಪುರ.	999-00
12.	189/88	ಶ್ರೀ ಅಂಗಾರ, ಬಿನ್ ಸುಕುಡ, ಕೂಲಿ, ಗುಡ್ಡೇತೋಟ.	343-00
13.	200/88	ಶ್ರೀ ಎಚ್. ಎಂ. ಶ್ರೀನಿವಾಸ, ಬಿನ್ ಮಹಾಬಲಯ್ಯ, ಹೆದ್ಸೆ, ಲೋಕನಾಥಪುರ ಅಂಚೆ.	1225-00
14.	204/88	ಶ್ರೀ ವೈ. ಎಂ. ಸುರೇಂದ್ರ, ಬಿನ್ ಮಂಜಪ್ಪ ಗೌಡ, ಯಡೂರು, ದಯಂಬಳ್ಳಿ ಅಂಚೆ.	2433-00
15.	216/88	ಶ್ರೀ ಬಿ. ಎಸ್. ಅಚ್ಯುತ, ಬಿನ್ ಸೂರ್ಯನಾರಾಯಣ ವರ್ಕ್‌ಶಾಪ್, ಬಸರಿಕಟ್ಟೆ	4780-00
16.	227/88	ಶ್ರೀ ಎಸ್. ರಾಮಮೂರ್ತಿ ಬಿನ್ ಶ್ರೀನಿವಾಸ ಹೆಗ್ಡೆ, ಬಾಳ್ಯದಮಕ್ಕಿ ಲೋಕನಾಥಪುರ ಅಂಚೆ.	671-00
17.	242/88	ಶ್ರೀ ಮುನಿಯಪ್ಪ, ಬಿನ್ ರಾಮಸ್ವಾಮಿ, ವ್ಯಾಪಾರಿ, ಜಲದುರ್ಗ, ಜಯಪುರ ಅಂಚೆ.	381-00
18.	262/88	ಶ್ರೀ ಈಶ್ವರೀ ಗೌಡ, ಬಿನ್ ಪುಪ್ಪೇಗೌಡ, ಟೀಚರ್, ಎಲ್. ಪಿ. ಎಸ್., ಕುಂದೂರು.	1117-00

(೬ನೇ ಪುಟಕ್ಕೆ)

ಪ್ರಸಿದ್ಧ ಕಲಾವಿದರಿಂದ ಪರಿಸರದ ಬಗ್ಗೆ ಶೃಂಗೇರಿಯಲ್ಲಿ ವ್ಯಂಗ್ಯ ಚಿತ್ರ ಪ್ರದರ್ಶನ

ಶೃಂಗೇರಿ : ಪ್ರಸಿದ್ಧ ವ್ಯಂಗ್ಯ ಚಿತ್ರ ಕಲಾವಿದರಾದ ಜೇಮ್ಸ್ ವಾಜ್, ರಾಮಮೂರ್ತಿ ಮತ್ತು ನಟರಾಜ್ ಅವರುಗಳಿಂದ ಪರಿಸರ ವಿನಾಶ ಕುರಿತ ಉತ್ತಮವಾದ ವ್ಯಂಗ್ಯಚಿತ್ರ ಪ್ರದರ್ಶನ ಕಳೆದ ತಿಂಗಳು ಇಲ್ಲಿನ ಜೆ.ಸಿ.ಬಿ.ಎಂ ಕಾಲೇಜಿನಲ್ಲಿ ನಡೆಯಿತು. ಪ್ರಿನ್ಸಿಪಾಲ್ ಪ್ರೊ|| ಎಂ. ಕೃಷ್ಣಪ್ಪಯ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮ ವಿದ್ಯಾರ್ಥಿಗಳನ್ನು ಅಪಾರವಾಗಿ ಆಕರ್ಷಿಸಿತು.

(ವರದಿ : ಪಾಪಣ್ಣ)

ಮಿಂಚು ರೋಗ: ೪ ದನಗಳ ಹಠಾತ್ ಸಾವು

ಹರಿಹರಪುರ : ಇಲ್ಲಿಗೆ ಸಮೀಪದ ಹೊಸಕೊಪ್ಪದಲ್ಲಿ ಶಂಕರ ಶೆಟ್ಟಿ ಎಂಬವರ ನಾಲ್ಕು ಮಿಶ್ರ ತಳಿ ಹಸುಗಳು ಈಚೆಗೆ ಮಿಂಚು ಕಾಯಿಲೆಯಿಂದ ಹಠಾತ್ ಸಾವನ್ನಪ್ಪಿದ ದಾರುಣ ಘಟನೆ ವರದಿಯಾಗಿದೆ. ಕಾಯಿಲೆ ಸುದ್ದಿ ತಿಳಿದ ಹರಿಹರಪುರದ ಜನಪ್ರಿಯ ಪಶುವೈದ್ಯರಾದ ಡಾ|| ಧರ್ಮಪ್ಪನವರು ಕೂಡಲೇ ಧಾವಿಸಿ ಚಿಕಿತ್ಸೆ ನೀಡಿದರಲ್ಲದೆ, ಹೆಚ್ಚಿನ ಚಿಕಿತ್ಸೆಗಾಗಿ ಕೊಪ್ಪದ ಪಶುವೈದ್ಯರಾದ ಡಾ|| ಬಂಗಾರಪ್ಪ, ಡಾ|| ವಿಶ್ವಮೂರ್ತಿ ಮತ್ತು ಡಾ|| ಜಗದೀಶರವರನ್ನೂ ಕರೆಸಿಕೊಂಡು, ಎಲ್ಲರೂ ಸೇರಿ ಬೆಳಿಗ್ಗೆಯಿಂದ ಸಂಜೆಯವರೆಗೆ ಅವಿರತವಾಗಿ ಶ್ರಮಿಸಿದರೂ ಹಸುಗಳನ್ನು ಉಳಿಸಿಕೊಳ್ಳಲಾಗಲಿಲ್ಲ. ಬೆಂಗಳೂರಿನ ಪಶು ವೈದ್ಯ ವಿಜ್ಞಾನಿಗಳನ್ನು ಪಹ ದೂರವಾಣಿ ಮೂಲಕ ಈ ಕೆಲಸಕ್ಕಾಗಿ ಡಾ|| ಧರ್ಮಪ್ಪ ಕರೆಸಿಕೊಂಡಿದ್ದು, ಅವರುಗಳ ಪರೀಕ್ಷೆಯಿಂದ ಮಿಂಚು ಕಾಯಿಲೆ ದೃಢಪಟ್ಟಿರುವುದು ಖಚಿತವಾಗಿದೆ.

(ವರದಿ : ಜೆ. ಎ. ಶ್ರೀನಿಧಿ)

ಎರಡು ಸನ್ಮಾನಗಳು

ಲೋಕನಾಥಪುರ

ಇಲ್ಲಿನ ಹಿರಿಯ ಪ್ರಾಥಮಿಕ ಶಾಲಾ ಅಧ್ಯಾಪಕರಾಗಿದ್ದು ನಿವೃತ್ತರಾಗಿರುವ ಶ್ರೀಮತಿ ಮತ್ತು ಶ್ರೀ ಜೋಸೆಫ್ ವ್ಯಾಕ್ಸರಿನ್ಯಾಸ್‌ರವರನ್ನೂ, ಡಾಕ್ಟರೇಟ್ ಪಡೆದಿರುವ ಇದೇ ಊರಿನವರಾದ ಡಾ|| ಕೆ.ಆರ್. ಚಂದ್ರಶೇಖರ್‌ರವರನ್ನೂ ಇಲ್ಲಿ ಈಚೆಗೆ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಇಲ್ಲಿನ ಆದರ್ಶ ಯುವಕ ಸಂಘ, ಯುವತಿ ಮಂಡಳಿ ಮತ್ತು ಸ.ಹಿ.ಪ್ರಾ. ಶಾಲೆಗಳ ವಾರ್ಷಿಕೋತ್ಸವ ಸಮಾರಂಭದಲ್ಲಿ ಈ ಸನ್ಮಾನ ಜರುಗಿತು. ಮಂಡಲ ಪ್ರಧಾನ ಜಯಪ್ರಕಾಶ್ ಅಧ್ಯಕ್ಷತೆ ವಹಿಸಿದ್ದರು. ತಹಸೀಲ್ದಾರ್ ಮತ್ತು ಎಇಒ ಮುಖ್ಯ ಅತಿಥಿಗಳಾಗಿದ್ದರು.

ಶಾಲಾ ಮಕ್ಕಳಿಂದ ಮತ್ತು ಯುವಕ-ಯುವತಿಯರಿಂದ ಉತ್ತಮ ಮನರಂಜನಾ ಕಾರ್ಯಕ್ರಮಗಳು ನಡೆದುವು.

(ವರದಿ: ಎಂ. ಎಸ್. ಸುಬ್ರಮಣ್ಯ)

ಗುಡ್ಡೇಕೋಟೆ

ಇಲ್ಲಿನ ಸ.ಹಿ.ಪ್ರಾ. ಶಾಲೆಯಲ್ಲಿ ೯ ವರ್ಷ ಉತ್ತಮ ಸೇವೆ ಸಲ್ಲಿಸಿದ ಬಿ.ಜಿ. ಮಹಾದೇವಯ್ಯ ಅವರನ್ನು ಈಚೆಗೆ ಮಂಡಲ ಪ್ರಧಾನ ಎ.ಸಿ. ವಜ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವದಂದು ಸನ್ಮಾನಿಸಲಾಯಿತು. ಟಿ. ಶಂಕರ್ ಮುಖ್ಯ ಅತಿಥಿಯಾಗಿದ್ದರು. ಕೆ. ಶಿವಶಂಕರರಾವ್ ಶಾಲಾವನ ಉದ್ಘಾಟಿಸಿದರು. ಎಇಒ ಚಾಮರಾಜ್ ಮುಕ್ತಾಯ ಭಾಷಣ ಮಾಡಿದರು.

(ವರದಿ : ಎಂ.ವಿ. ಗಂಗಾಧರ್.)

ಡಾ|| ಮೊಸಳಿ ಪ್ರತಿಭಾ ಪ್ರಶಸ್ತಿ ಕೆ. ರಾಘವೇಂದ್ರನಿಗೆ

ಜಯಪುರ : ಇಲ್ಲಿನ ಪ್ರೌಢಶಾಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಾಗಿ ಡಾ|| ಮೊಸಳಿಯವರು ಕೊಡ ಮಾಡಿರುವ ಪರ್ಯಾಯ ಪ್ರತಿಭಾ ಫಲಕವನ್ನು ಕಳೆದ ಸಾಲಿನ ವಿದ್ಯಾರ್ಥಿ ಕೆ. ರಾಘವೇಂದ್ರ ಪಡೆದುಕೊಂಡಿದ್ದಾರೆ. ಈಚೆಗೆ ನಡೆದ ಶಾರದಾ ಪೂಜೆ ಮತ್ತು ಬಹುಮಾನ ವಿತರಣೆ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿ ಫಲಕವನ್ನು ವಿತರಿಸಲಾಯಿತು.

ಪದಾಧಿಕಾರಿಗಳು

ಹುಲಿಗರಡಿ ಯುವಕ ಸಂಘ

ಎಚ್.ಎಂ. ಗಿರೀಶ್ (ಅಧ್ಯಕ್ಷ), ರಮೇಶ್ (ಉಪಾಧ್ಯಕ್ಷ), ಸುಬ್ರಮಣ್ಯ (ಕಾರ್ಯದರ್ಶಿ), ಶಿವಶಂಕರ್ (ಸಹ ಕಾರ್ಯದರ್ಶಿ), ಶಶಿಶೇಖರ್ (ಖಜಾಂಚಿ).

ಶೃಂಗೇರಿ ತಾ|| ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ

ರಾಮರಾಜ ಅರಸ್ (ಅಧ್ಯಕ್ಷರು), ಸದಾಶಿವಯ್ಯ ಮತ್ತು ಲಲಿತಾ ಜಿ. ಪ್ರಸಾದ್ (ಉಪಾಧ್ಯಕ್ಷರು), ಜಿ.ಇ. ಬಸವರಾಜಪ್ಪ (ಪ್ರಧಾನ ಕಾರ್ಯದರ್ಶಿ), ಶಾಂತ ಆ.ಎಸ್.ಆರ್, ಎಚ್. ಶಂಕರ್ (ಸಹ ಕಾರ್ಯದರ್ಶಿಗಳು), ಶಾಮಯ್ಯ (ಖಜಾಂಚಿ) ಮತ್ತು ನಾಲ್ವರು ಸಂಘಟನಾ ಕಾರ್ಯದರ್ಶಿಗಳು.

(ವರದಿ: ಶಂಕರ್ ವೆ.ಣಕೆ)

"ವಿದ್ಯೆಯಿಂದ ವ್ಯಕ್ತಿತ್ವ, ವ್ಯಕ್ತಿತ್ವದಿಂದ ಆತ್ಮ ವಿಶ್ವಾಸ"

(೨ನೇ ಪುಟದಿಂದ)
ರಜತಮಹೋತ್ಸವ ಕಾರ್ಯಕ್ರಮಗಳ ಸವಿನೆನಪಿಗಾಗಿ ತಲಾ ಆರು ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುವ ಬಹು ಉಪಯೋಗಿ ಸಭಾಭವನ ಹಾಗೂ ಅಧ್ಯಾಪಕರ ವಸತಿಗೃಹ ಸಮುಚ್ಚಯಕ್ಕೆ ರಂಗಪ್ರಿಯ ಸ್ವಾಮಿಗಳು ಶಿಲಾನ್ಯಾಸ ಮಾಡಿದರು.

ಸಹಮುಖ್ಯೋಪಾಧ್ಯಾಯ ಎಚ್.ಎಸ್. ಕೃಷ್ಣಮೂರ್ತಿ ಸ್ವಾಗತಿಸಿದರು. ರಜತ ಮಹೋತ್ಸವ ಸಮಿತಿ ಉಪಾಧ್ಯಕ್ಷ ಜಿ. ಸುಬ್ಬರಾವ್ ಬೆಳ್ಳಿ ಹಬ್ಬದ ಕುರಿತು ಮಾತನಾಡಿದರು. ಕಾರ್ಯದರ್ಶಿ ಜಿ. ಸಿ. ಗೋಪಾಲಕೃಷ್ಣ ವರದಿ ಓದಿದರು. ಮುಖ್ಯೋಪಾಧ್ಯಾಯ ಬಿ. ವಿ. ಶ್ರೀನಿವಾಸ್ ವಂದಿಸಿದರು.

ಮೂರು ದಿನಗಳ ಕಾಲ ವಿಜೃಂಭಣೆಯಿಂದ ಜರುಗಿದ ವೈಶಿಷ್ಟ್ಯಪೂರ್ಣ ರಜತ ಮಹೋತ್ಸವಕ್ಕೆ ಫೆಬ್ರವರಿ ೧೫ ರಂದು ಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವದೊಂದಿಗೆ ನಾಂದಿ. ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಡಿ.ಡಿ.ಪಿ.ಐ. ಯವರಾದ ಎಸ್. ಆರ್. ವಿನ್ಸೆಂಟ್ ಅವರು, ಪ್ರತಿ ವರ್ಷ ಈ ಶಾಲೆ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಅತ್ಯುತ್ತಮ ಫಲಿತಾಂಶ ಸಾಧಿಸುವುದಕ್ಕೆ ಕಾರಣಕರ್ತರಾದ ಅಧ್ಯಾಪಕ ವರ್ಗವನ್ನು ಅಭಿನಂದಿಸಿದರು.

ಯೋಜನಾ ಆಯೋಗದ ಸಂಶೋಧಕ ಅಧಿಕಾರಿಯಾಗಿ ನವದೆಹಲಿಯಲ್ಲಿರುವ ಸ್ಥಳೀಯ ಪ್ರತಿಭೆ, ಹೊಸಕೊಪ್ಪ ಎಂ. ಮಂಜುನಾಥ್ ಅವರು ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದರು. ಸಹ ಶಿಕ್ಷಕಿ ಶ್ರೀಮತಿ ಭಾರತಿಯವರು ನಿರ್ದೇಶಿಸಿದ "ಚಿನ್ನದ ಜಿಂಕೆ" ನಾಟಕ ಮತ್ತು ಇತರ ಸಾಂಸ್ಕೃತಿಕ ಕಾರ್ಯಕ್ರಮಗಳು ಮಕ್ಕಳಿಂದ ನಡೆದವು.

ನಿರಾಶೆಗೊಳಿಸಿದ ಸಿನೆಮಾ ತಾರೆ

ಫೆಬ್ರವರಿ ೧೬ ರಂದು ಪ್ರೌಢಶಾಲಾ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಬೇಕಿದ್ದ ಈ ಶಾಲೆಯ ಹಳೆ ವಿದ್ಯಾರ್ಥಿ ಸಿನೇಮಾ ನಟ, ಉದಯ್ ಹುತ್ತಿನಗದ್ದೆ ಬೆಂಗಳೂರಿನಿಂದ ಬಾರದೇ ಇದ್ದುದು ನೆರೆದಿದ್ದ ನೂರಾರು ಸಿನೆಮಾ ಪ್ರಿಯರನ್ನು ನಿರಾಶೆಗೊಳಿಸಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಟಿ. ಆರ್. ನಾರಾಯಣ ಹೆಗ್ಡೆಯವರು ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯ ಎಂ. ವಾಸುದೇವ ಭಟ್ಟರನ್ನು ಸನ್ಮಾನಿಸಿ, ನೆನಪಿನ ಕಾಣಿಕೆ ನೀಡಿ, ಹದಿನೈದು ವರ್ಷಗಳ ಕಾಲ ಅವರು ಈ ಶಾಲೆಗೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿದರು. ಈಚೆಗೆ ಥ್ಯಾಲೆಂಡ್, ಸಿಂಗಾಪುರಗಳಲ್ಲಿ ಜರುಗಿದ ಆಹ್ವಾನಿತ ಅಂತಾರಾಷ್ಟ್ರೀಯ ತ್ರೋಬಾಲ್ ಟೂರ್ನಿಯಲ್ಲಿ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಳಿಸಿ ದೇಶವನ್ನು ಪ್ರತಿನಿಧಿಸಿದ್ದ ಶಾಲೆಯ ಹಳೇ ವಿದ್ಯಾರ್ಥಿನಿ ಕು|| ಬಿ. ಎನ್. ವಿದ್ಯಾರವರಿಗೂ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. (ವರದಿ : ರವಿ)

ಶ್ರೀನಿವಾಸ ಜೋಯಿಸ್ ನಿಧನ

ಹರಿಹರಪುರ : ಇಲ್ಲಿನ ಹಿರಿಯ ಗಣ್ಯ ವ್ಯಕ್ತಿಗಳೂ ಪ್ರಮುಖ ಅಡಿಕೆ ಬೆಳೆಗಾರರೂ ಆಗಿದ್ದ ಶ್ರೀನಿವಾಸ ಜೋಯ್ಸರು ಫೆ. ೨೫ ರಂದು ನಿಧನರಾದರು. ಅವರಿಗೆ ೬೭ ವರ್ಷ ವಯಸ್ಸಾಗಿತ್ತು.

ಅವರ ಮರಣದ ಸುದ್ದಿ ತಿಳಿದು ಊರು-ಪರವೂರುಗಳಿಂದ ಅವರ ಅಸಂಖ್ಯ ಅಭಿಮಾನಿಗಳು ಬಂದು ಅಂತಿಮ ದರ್ಶನ ಪಡೆದರು. ಸ್ಥಳೀಯ ಕಿರಿಯ ಕಾಲೇಜಿನ ಆಡಳಿತ ಸಮಿತಿ ಸದಸ್ಯರೂ ಆಗಿದ್ದ ಮೃತರ ಗೌರವಾರ್ಥ ಫೆ. ೨೬ ರಂದು ಸ್ಥಳೀಯ ಶಾಲಾ ಕಾಲೇಜು ಗಳಿಗೆ ರಜೆ ಕೊಡಲಾಗಿತ್ತು.

ತಾಯಿಯೇ ತಲೆಗೆ ಬಡಿದ ಪೆಟ್ಟಿಗೆ ಮಗಳ ಬಲಿ

ಹರಿಹರಪುರ : ಇಲ್ಲಿಗೆ ಸಮೀಪದ ಮಾಕೋಡಿನಲ್ಲಿ ನೀಲಮ್ಮ ಎಂಬಾಕೆ, ನೀರು ತರಲು ನಿರಾಕರಿಸಿದ ತನ್ನ ಮಗಳು ಭಾಗ್ಯಳ ತಲೆಗೆ ಬಲವಾಗಿ ಹೊಡೆದಾಗ ಆಕೆ ಸಾವಪ್ಪಿದ ದುರಂತ ಸಂಭವಿಸಿದೆ.

ಇದರಿಂದ ಗಾಬರಿಯಾದ ನೀಲಮ್ಮ, ಮಗಳ ಶವವನ್ನು ಒಂದೆಡೆ ಕೂರಿಸಿ, ಪಕ್ಕದಲ್ಲಿ ವಿಷದ ಬಾಟಲಿ ಇಟ್ಟು, ಇದೊಂದು ಆತ್ಮಹತ್ಯೆ ಪ್ರಕರಣವೆಂದು ಜನರನ್ನು ನಂಬಿಸಿದ್ದಳು. ಆದರೆ ಶವ ಪರೀಕ್ಷೆಯಿಂದ ಸತ್ಯ ಹೊರಬಂತೆನ್ನಲಾಗಿದೆ.

ಇಲ್ಲಿನ ಪೋಲೀಸರು ಆಕೆಯನ್ನು ಬಂಧಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ವಾರದ ಪುರವಣಿಯ ಕತೆಗಳ ವಿಮರ್ಶಾ ಸ್ಪರ್ಧೆ

ಕೊಪ್ಪ : ರಾಜ್ಯ ಮಟ್ಟದ ಕನ್ನಡ ದೈನಿಕಗಳ ಸಾಪ್ತಾಹಿಕ ಪುರವಣಿಗಳಲ್ಲಿ ಬರುವ ಕತೆಗಳ ವಿಮರ್ಶಾ ಸ್ಪರ್ಧೆಯ ಅಂಗವಾಗಿ ತಾ|| ೨೪-೩-೯೧ನೇ ಭಾನುವಾರದ ಪ್ರಜಾವಾಣಿ, ಕನ್ನಡಪ್ರಭ, ಉದಯವಾಣಿ ಮತ್ತು ಸಂಯುಕ್ತ ಕರ್ನಾಟಕಗಳಲ್ಲಿ ಪ್ರಕಟವಾಗುವ ಸಣ್ಣ ಕತೆಗಳು ಜನಜೀವನಕ್ಕೆ ಎಷ್ಟು ಸ್ಪಂದಿಸಿವೆ ಎಂಬ ಬಗ್ಗೆ ವಿಮರ್ಶೆ ನಡೆಸುವ ಸ್ಪರ್ಧೆ ೩೦-೩-೯೧ನೇ ಶನಿವಾರ ಬೆಳಿಗ್ಗೆ ೧೧ ಗಂಟೆಗೆ ಕಮ್ಮರಡಿಯಲ್ಲಿ ಏರ್ಪಟ್ಟಿದೆ. ಸ್ಪರ್ಧಿಗಳು ತಮ್ಮ ಪ್ರಬಂಧಗಳನ್ನು ಮುಂಚಿತವಾಗಿ ಬರೆದು ತರಬೇಕು.

ಆಸಕ್ತರು, ಎ. ಎನ್. ಸೇರಿಗಾರ್, ಕಾರ್ಯದರ್ಶಿ, ಕೊಪ್ಪ ತಾ|| ಕನ್ನಡ ಸಾಹಿತ್ಯ ಪರಿಷತ್ತು, ಹರಿಹರಪುರ-ಇವರಲ್ಲಿ ತಮ್ಮ ಹೆಸರುಗಳನ್ನು ೨೪-೩-೯೧ರೊಳಗೆ ನೊಂದಾಯಿಸಲು ಕೋರಲಾಗಿದೆ.

ನಾರ್ವೆ ರಥೋತ್ಸವ

ನಾರ್ವೆ : ಇಲ್ಲಿನ ಚಂಡಿಕೇಶ್ವರಿ ಅಮ್ಮನವರ ರಥೋತ್ಸವ ಏ. ೧ನೇ ಸೋಮವಾರ ನಡೆಯಲಿದೆ.

(೪ನೇ ಪುಟದಿಂದ)

ಹರಾಜು ನೋಟೀಸು

ಕ್ರಮ ಸಂಖ್ಯೆ	ಸಾಲದ ನಂಬರು	ಸಾಲಗಾರರ ಹೆಸರು ಮತ್ತು ವಿಳಾಸ	ಮೊಬಲಗು (31-12-90 ರ ವರೆಗಿನ ಬಡ್ಡಿ ಸೇರಿ)
19.	265/88	ಶ್ರೀ ಎಚ್. ಎಂ. ಶ್ರೀನಿವಾಸ, ಬಿನ್ ಮಹಾಬಲಯ್ಯ, ಹೆದ್ಸೆ, ಲೋಕನಾಥಪುರ.	1067-00
20.	54/86	ಶ್ರೀ ಎಂ. ಐ. ಶ್ರೀನಿವಾಸ ಮೂರ್ತಿ, ಬಿನ್ ಅಯ್ಯಣ್ಣ ಗೌಡ, ಮೂಡಬಾಗಿಲು ಅಂಚೆ, ಎನ್. ಆರ್. ಪುರ ತಾಲ್ಲೂಕ್.	1729-00
21.	55/86	ಶ್ರೀ ಎಂ. ಐ. ಶ್ರೀನಿವಾಸ ಮೂರ್ತಿ, ಬಿನ್ ಅಯ್ಯಣ್ಣ ಗೌಡ, ಮೂಡುಬಾಗಿಲು ಅಂಚೆ, ಎನ್. ಆರ್. ಪುರ ತಾಲ್ಲೂಕು.	7292-00

ಸ್ಥಳ : ಜಯಪುರ.

(ಸಹಿ)
ಶಾಖಾಧಿಕಾರಿ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಗಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚುಕೂಟ, ಕೊಪ್ಪ